# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1031
ಸದಸ್ಯರ ಹೆಸರು : ಶ್ರೀ ಬಿ.ಎಂ. ಫಾರೂಖ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 21.09.2021.
ಉತ್ತರಿಸುವವರು : ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಿರುದ್ಯೋಗ ಪದವೀಧರರು ಸ್ವಯಂ ಉದ್ಯೋಗ ಮಾಡಲು ಮುಂದೆ ಬಂದಲ್ಲಿ, ಅವರುಗಳಿಗೆ ಸಿಗುವ ಸೌಲಭ್ಯಗಳೇನು; ಸಿಗುವ ರಿಯಾಯಿತಿಗಳೇನು; | ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನಾ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಯುವಕ/ ಯುವತಿಯರು ತಯಾರಿಕಾ ಮತ್ತು ಸೇವಾ ಚಟುವಟಿಕೆಗಳಿಗೆ ಗರಿಷ್ಟ ಯೋಜನ ವೆಚ್ಚ ಅನುಕ್ರಮವಾಗಿ ರೂ.25 ಲಕ್ಷ ಮತ್ತು ರೂ.10 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆ ಗರಿಷ್ಟ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ. |
| ಆ) | ಪದವೀಧರರು ಸ್ವಂತ ಉದ್ದಿಮೆ ಸ್ಥಾಪಿಸಲು ಮುಂದೆ ಬಂದಲ್ಲಿ, ಅವರಿಗೆ ಅವಶ್ಯವಿರುವ ಜಮೀನು ಸರ್ಕಾರ ಒದಗಿಸುವುದೇ; ಅದಕ್ಕಿರುವ ಷರತ್ತುಗಳೇನು; ಯಾವ ಯಾವ ರೀತಿಯ ಪ್ರೋತ್ಸಾಹ ಮತ್ತು ಸಹಾಯ ನೀಡಲಿದೆ; (ವಿವರ ನೀಡುವುದು) | ಪದವೀಧರರು ಸ್ವಂತ ಉದ್ದಿಮೆ ಸ್ಥಾಪಿಸಲು ಮುಂದೆ ಬಂದಲ್ಲಿ, ಅವರಿಗೆ ಅವಶ್ಯವಿರುವ ಜಮೀನನ್ನು ಸರ್ಕಾರವು ಲಭ್ಯತೆಯ ಮತ್ತು ಯೋಜನಾ ವೆಚ್ಚದ ಇತರೆ ಅಂಶಗಳ ಆಧಾರದ ಮೇಲೆ ಒದಗಿಸುವುದು.<br><br>ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳನ್ನು ಅನುಮೋದಿಸಲು ಮತ್ತು ನಿವೇಶನ ಹಂಚಿಕೆಗಾಗಿ ಸರ್ಕಾರವು 2 ಸಮಿತಿಗಳನ್ನು ರಚಿಸಿರುತ್ತದೆ.<br>ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿಯಲ್ಲಿ ರೂ.15 ಕೋಟಿಗಿಂತ ಕಡಿಮೆ ಯೋಜನಾ ವೆಚ್ಚದ 2.00 ಎಕರೆಗಿಂತ ಕಡಿಮೆ ವಿಸ್ತೀರ್ಣದ ನಿವೇಶನ ಅವಶ್ಯವಿರುವ ಯೋಜನೆಗಳನ್ನು ಪರಾಮರ್ಶಿಸಿ ಅವುಗಳಿಗೆ ಅಗತ್ಯವಿರುವ ಭೂಮಿ ಹಂಚಿಕೆ ಮಾಡಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಶಿಫಾರಸ್ಸು ಮಾಡಲಾಗುವುದು. ಸಣ್ಣ ಕೈಗಾರಿಕೆಗಳಿಗೆ ನಿವೇಶನ ಅವಶ್ಯವಿರುವ ಪ್ರಸ್ತಾವನೆಗಳಿಗೆ ನಿವೇಶನ ಹಂಚಿಕೆ ಮಾಡಲು ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗೆ ಶಿಫಾರಸ್ಸು ಮಾಡಲಾಗುವುದು.<br><br>ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಅಧ್ಯಕ್ಷರಾಗಿರುವ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿಯಲ್ಲಿ ರೂ.15 ಕೋಟಿ ಮೇಲ್ಪಟ್ಟು ರೂ.500 ಕೋಟಿಗಿಂತ ಕಡಿಮೆ ಯೋಜನಾ ವೆಚ್ಚದ ಯೋಜನೆಗಳಿಗೆ ಮತ್ತು ಅವುಗಳಿಗೆ ಅಗತ್ಯವಾದ ನಿವೇಶನವನ್ನು ಲ್ಯಾಂಡ್ ಆಡಿಟ್ ಕಮಿಟಿಯಲ್ಲಿ |

| | | |
|---|---|---|
| | | ಪರಾಮರ್ಶಿಸಿ ಹಂಚಿಕೆ ಮಾಡಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಗೆ ಶಿಫಾರಸ್ಸು ಮಾಡಲಾಗುವುದು.<br><br>ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಅಭಿವೃದ್ಧಿ ಪಡಿಸಿದ ಕೈಗಾರಿಕಾ ವಸಾಹತುಗಳಲ್ಲಿ ಕೈಗಾರಿಕಾ ನಿವೇಶನ ಹಂಚಿಕೆ ಮಾಡಲು ಪಾಲಿಸಲಾಗುವ ನಿಯಮಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.<br><br>ಈ ನಿವೇಶನಗಳನ್ನು ಪಡೆದು ಕೈಗಾರಿಕೆ ಪ್ರಾರಂಭಿಸಿದ ನಂತರ ಹೊಸ ಕೈಗಾರಿಕಾ ನೀತಿ 2020-25 ರನ್ವಯ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತದೆ. ವಿವರಗಳನ್ನು **ಅನುಬಂಧ 1 ಮತ್ತು 2** ರಲ್ಲಿ ನೀಡಲಾಗಿದೆ. |
| ಇ) | ಈಗಾಗಲೇ ಸ್ವಂತ ಉದ್ದಿಮೆ ಸ್ಥಾಪಿಸಿದವರಿಗೆ ಅಂದರೆ, ರೆಡಿಮಿಕ್ಸ್ ಕಾಂಕ್ರೀಟ್ ಬ್ರಿಕ್ಸ್ ಇಂಡಸ್ಟ್ರೀಸ್ ಸ್ಥಾಪಿಸಿರುವವರಿಗೆ ನೀಡುವ ಸೌಲಭ್ಯ ರಿಯಾಯಿತಿ ಪ್ರೋತ್ಸಾಹಗಳೇನು; | ಹೊಸ ಕೈಗಾರಿಕಾ ನೀತಿ 2020-25 ರ **ಅನುಬಂಧ-4** : ಪ್ರೋತ್ಸಾಹ ಮತ್ತು ರಿಯಾಯಿತಿಗಳಿಗೆ ಅನರ್ಹವಾದ ಚಟುವಟಿಕೆಗಳ ಪಟ್ಟಿ ಕ್ರಮ ಸಂಖ್ಯೆ 22 ರಲ್ಲಿ ರೆಡಿಮಿಕ್ಸ್, ಕಾಂಕ್ರಿಟ್ ತಯಾರಿಕೆ ಘಟಕಗಳು ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯಲು ಅನರ್ಹ ಎಂದು ತಿಳಿಸಲಾಗಿದೆ.<br>ಹೊಸ ಕೈಗಾರಿಕಾ ನೀತಿ 2020-25 ರ **ಅನುಬಂಧ-4** : ಪ್ರೋತ್ಸಾಹ ಮತ್ತು ರಿಯಾಯಿತಿಗಳಿಗೆ ಅನರ್ಹವಾದ ಚಟುವಟಿಕೆಗಳ ಪಟ್ಟಿ ಕ್ರಮ ಸಂಖ್ಯೆ 12 ರಲ್ಲಿ ಸಿಮೆಂಟ್ ಹಾಲೋ/ ಸಾಲಿಡ್ ಬ್ಲಾಕ್ಸ್, ವೈರ್‌ಕಟ್, ಹಾರುಬೂದಿ ಇಟ್ಟಿಗೆ ಮತ್ತು ರಿಫ್ಯಾಕ್ಟರಿ ಇಟ್ಟಿಗೆ ಉತ್ಪಾದನಾ ಉದ್ದಿಮೆಗಳನ್ನು ಹೊರತುಪಡಿಸಿ ಇತರೆ ಇಟ್ಟಿಗೆ ತಯಾರಿಸುವ ಘಟಕಗಳು ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯಲು ಅನರ್ಹ ಎಂದು ತಿಳಿಸಲಾಗಿದೆ.<br>ಸಿಮೆಂಟ್ ಹಾಲೋ/ ಸಾಲಿಡ್ ಬ್ಲಾಕ್ಸ್, ವೈರ್‌ಕಟ್, ಹಾರುಬೂದಿ ಇಟ್ಟಿಗೆ ಮತ್ತು ರಿಫ್ಯಾಕ್ಟರಿ ಇಟ್ಟಿಗೆ ಉತ್ಪಾದನಾ ಉದ್ದಿಮೆಗಳಿಗೆ ಹೊಸ ಕೈಗಾರಿಕಾ ನೀತಿ 2020-25 ರನ್ವಯ ನೀಡಲಾಗುವ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |

**ಸಿಐ 145 ಸಿಎಸ್‌ಸಿ 2021**

(ಎನ್. ನಾಗರಾಜು (ಎಂ.ಟಿ.ಬಿ))
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.

ಅನುಬಂಧ-1: ಕೈಗಾರಿಕಾ ಉತ್ತೇಜನಾಕ್ಕಾಗಿ ರಾಜ್ಯ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಮತ್ತು ರಿಯಾಯಿತಿಗಳು

## ಆರ್ಥಿಕ ಉತ್ತೇಜನಗಳು

ಕೋಷ್ಟಕ 9.1.1

<table>
<tr><th>ಉತ್ತೇಜನದ ಮಾದರಿ</th><th>ಸಾಮಾನ್ಯ ಪ್ರವರ್ಗ</th><th>ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಉದ್ಯಮಶೀಲ ಸೈನಿಕರು</th></tr>
<tr><td rowspan="2">ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ</td><td>ಸೂಕ್ಷ್ಮ ಕೈಗಾರಿಕೆಗಳು<br><br>ವಲಯ 1: ವಿಎಫ್ಎಯ 30% (ಗರಿಷ್ಠ ರೂ.25ಲಕ್ಷ)<br>ವಲಯ 2: ವಿಎಫ್ಎಯ 25% (ಗರಿಷ್ಠ ರೂ.20ಲಕ್ಷ)<br>ವಲಯ 3: ಇಲ್ಲ<br><br>ಸಣ್ಣ ಕೈಗಾರಿಕೆಗಳು<br><br>ವಲಯ 1: ವಿಎಫ್ಎಯ 25% (ಗರಿಷ್ಠ ರೂ.100ಲಕ್ಷ)<br>ವಲಯ 2: ವಿಎಫ್ಎಯ 20% (ಗರಿಷ್ಠ ರೂ.90ಲಕ್ಷ)<br>ವಲಯ 3: ಇಲ್ಲ<br><br>ವಿಎಫ್ಎ –ಸ್ಥಿರಾಸ್ತಿಯ ಮೌಲ್ಯ</td><td>ಸೂಕ್ಷ್ಮ ಕೈಗಾರಿಕೆಗಳು<br><br>ವಲಯ 1: ವಿಎಫ್ಎಯ 35% (ಗರಿಷ್ಠ ರೂ.30ಲಕ್ಷ)<br>ವಲಯ 2: ವಿಎಫ್ಎಯ 30% (ಗರಿಷ್ಠ ರೂ.25ಲಕ್ಷ)<br>ವಲಯ 3: ವಿಎಫ್ಎನ 10% (ಗರಿಷ್ಠ ರೂ.10ಲಕ್ಷ)<br><br>ಸಣ್ಣ ಕೈಗಾರಿಕೆಗಳು<br><br>ವಲಯ 1: ವಿಎಫ್ಎಯ 30% (ಗರಿಷ್ಠ ರೂ.105ಲಕ್ಷ)<br>ವಲಯ 2: ವಿಎಫ್ಎಯ 25% (ಗರಿಷ್ಠ ರೂ.95ಲಕ್ಷ)<br>ವಲಯ 3: ವಿಎಫ್ಎನ 10% (ಗರಿಷ್ಠ ರೂ.25ಲಕ್ಷ)<br><br>ವಲಯ 1 ಮತ್ತು 2 ರಲ್ಲಿ ವಿಎಫ್ಎಯ 5% ಹೆಚ್ಚುವರಿ ಸಬ್ಸಿಡಿ ಗರಿಷ್ಠ ರೂ.5 ಲಕ್ಷ</td></tr>
<tr><td colspan="2">ಸೂಚನೆ:<br>ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇ.10 ರಷ್ಟು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪಡೆಯಬಹುದು ಮತ್ತು ಈ ಸಹಾಯಧನವನ್ನು ವಾಣಿಜ್ಯ ಉತ್ಪಾದನೆ ಆರಂಭಿಸಿದ ದಿನಾಂಕದಿಂದ ಗರಿಷ್ಠ 5 ಆರ್ಥಿಕ ವರ್ಷಗಳವರೆಗೆ ವಿಸ್ತರಿಸಬಹುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ಮೇಲ್ಕಾಣಿಸಿದ ಗರಿಷ್ಠ ಮಿತಿಗೆ ಒಳಪಟ್ಟಿರುತ್ತದೆ. ಈ ಹೂಡಿಕೆ ಉತ್ತೇಜನಾ ಸಬ್ಸಿಡಿಯ ಮಿತಿಯು ಅವಧಿ ಮುಗಿಯುವವರೆಗೆ (5ಆರ್ಥಿಕ ವರ್ಷಗಳವರೆಗೆ )ಅಥವಾ ಮಿತಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.</td></tr>
<tr><td>ಮಧ್ಯಮ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಬ್ಸಿಡಿ<br><br>ಮೊದಲ 10 ಕೋಟಿ ರೂಗಳಿಗೆ ಕನಿಷ್ಠ ಉದ್ಯೋಗಾವಕಾಶ ಸಂಖ್ಯೆ 20 ಮತ್ತು ಮುಂದಿನ ಹೆಚ್ಚುವರಿ ಪ್ರತೀ ರೂ.10 ಕೋಟಿಗೆ ಹೆಚ್ಚುವರಿ 7 ಉದ್ಯೋಗಾವಕಾಶ ಪ್ರಮಾಣಾನುಪಾತದಂತೆ</td><td colspan="2">ಮಧ್ಯಮ ಕೈಗಾರಿಕೆಗಳು<br><br><table><tr><th>ವಲಯ</th><th>ಶೇಕಡಾವಾರು ವಹಿವಾಟು</th><th>ಗರಿಷ್ಠ ಅವಧಿ (ವರ್ಷ)</th><th>ವಿಎಫ್ಎ ಮಿತಿ</th></tr><tr><td>1</td><td rowspan="2">2.50%</td><td>6</td><td>ವಿಎಫ್ಎಯ 40 %</td></tr><tr><td>2</td><td>5</td><td>ವಿಎಫ್ಎಯ 35 %</td></tr><tr><td>3</td><td colspan="3">ಇಲ್ಲ</td></tr></table><br>ಸೂಚನೆ:<br>ಮಧ್ಯಮ ಕೈಗಾರಿಕೆಗಳು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇಕಡಾವಾರು ಪಡೆಯಬಹುದಾಗಿದ್ದು ಮೇಲ್ಕಾಣಿಸಿದಂತೆ ವಾಣಿಜ್ಯ ಉತ್ಪಾದನೆ ಆರಂಭಿಸಿದ ಗರಿಷ್ಠ ಅವಧಿಗೆ ಅನ್ವಯವಾಗುವುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ವಿಎಫ್ಎ ಮಿತಿ ಅಥವಾ ಅವಧಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.<br>ಕಡಿಮೆ ಉದ್ಯೋಗಾವಕಾಶ ಒದಗಿಸಲು ಬಯಸುವ ಮಧ್ಯಮ ಕೈಗಾರಿಕೆಗಳು/ಹೂಡಿಕೆಗೆ ತಕ್ಕಂತೆ ನಿಗದಿಪಡಿಸಿದ ಉದ್ಯೋಗಾವಕಾಶ ನೀಡಲು ಸಾಧ್ಯವಾಗದ ಕೈಗಾರಿಕೆಗಳಿಗೆ ಒಟ್ಟು ಒದಗಿಸಿದ ಉದ್ಯೋಗಾವಕಾಶಕ್ಕೆ ಅನುಗುಣವಾಗಿ ವಹಿವಾಟು ಶೇಕಡಾವಾರು ಪ್ರಮಾಣ ಕಡಿಮೆ ಆಗುವುದು. ಹೀಗಿದ್ದರೂ ಗರಿಷ್ಠ ಅವಧಿ ಮತ್ತು ವಿಎಫ್ಎ ಮೇಲ್ಕಂಡಂತೆ ಇರಲಿದೆ.</td></tr>
</table>

<table>
<tr><th>ಉತ್ತೇಜನದ ಮಾದರಿ</th><th>ಸಾಮಾನ್ಯ ಪ್ರವರ್ಗ</th><th>ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಉದ್ಯಮಶೀಲ ಸೈನಿಕರು</th></tr>
<tr><td rowspan="2">ಎಂಎಸ್ಎಂಇಗಳಿಗೆ ಸ್ಟಾಂಪ್ ಶುಲ್ಕ (ಡ್ಯೂಟಿ) ವಿನಾಯಿತಿ</td><td colspan="2">ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:<br>ರಾಜ್ಯ ಹಣಕಾಸು ನಿಗಮ, ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು,ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್), ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ಸರ್ಕಾರ ಕಾಲಾನುಕ್ರಮವಾಗಿ ಹೊರಡಿಸುವ ಅಧಿಸೂಚನೆಗಳಿಗೆ ಅನುಗುಣವಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು.<br><br>ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್ ಮತ್ತು ಬಹುಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕಿಯೋನಿಕ್ಸ್, ಕೈಗಾರಿಕಾ ಸಹಕಾರ ಸಂಘಗಳು, ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳು, ಆಹಾರ ಪಾರ್ಕ್‌ಗಳು, ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ(ಎಸ್/ಪಿ.ವಿ)ಗಳಿಂದ ಹಂಚಿಕೆ ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್ಸ್), ಭೋಗ್ಯ ಮತ್ತು ಕ್ರಯ ಪತ್ರ, ಉಪ-ಭೋಗ್ಯ(ಸಬ್ ಲೀಸ್) ಹಾಗೂ ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ ವಿನಾಯಿತಿ ನೀಡಬೇಕು.</td></tr>
<tr><td>ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ</td><td>ವಲಯ 1 : 100%<br>ವಲಯ 2 : 100%<br>ವಲಯ 3 : 75%</td></tr>
<tr><td>ಎಂಎಸ್ಎಂಇಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ</td><td>ವಲಯ1, ವಲಯ 2 : ರೂ.1000/-ಕ್ಕೆ ರೂ.1/- ವಲಯ 3 : ಇಲ್ಲ</td><td>ಎಲ್ಲಾ ವಲಯಗಳಿಗೆ :ರೂ.1000/-ಕ್ಕೆ ರೂ.1/-</td></tr>
<tr><td></td><td colspan="2">ಸೂಚನೆ:<br>1. ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿಗಳು ಕೆಎಲ್‌ಆರ್ ಕಾಯ್ದೆ 1961ರ ಸೆಕ್ಷನ್ 109ರ ಅಡಿಯಲ್ಲಿ ಖರೀದಿಸಿದ ಭೂಮಿ, ಹಾಗೂ ಎಸ್‌ಎಲ್‌ಡಬ್ಲ್ಯುಸಿಸಿ/ಡಿಎಲ್‌ಡಬ್ಲ್ಯುಸಿಸಿ ಅನುಮೋದಿತ ಯೋಜನೆಗಳ ಕೈಗಾರಿಕಾ ಭೂಪರಿವರ್ತಿತ ಭೂಮಿಯ ನೇರ ಖರೀದಿಗೂ ಅನ್ವಯವಾಗುವುದು. ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವಾಗಿ ಕೆಐಎಡಿಬಿ ಭೂ ಮಾಲೀಕರಿಗೆ ನೀಡುವ ಭೂಮಿಗೂ ಈ ರಿಯಾಯಿತಿ/ವಿನಾಯಿತಿ ನೀಡಲಾಗುವುದು.<br>2. ಭೂಮಿ,ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್‌ಗಳಿಗೆಭೋಗ್ಯದ ಅವಧಿ ಮುಗಿದ ಬಳಿಕ ಅಂತಿಮ ಕ್ರಯ ಪತ್ರ (ಸೇಲ್ ಡೀಡ್)ದ ನೋಂದಣಿಗೂ ಕೈಗಾರಿಕಾ ನೀತಿಯಲ್ಲಿ ನಮೂದಿಸಿರುವಂತೆ ಭೋಗ್ಯ ಮತ್ತು ಕ್ರಯಪತ್ರ (ಲೀಸ್ ಕಮ್ ಸೇಲ್ ಡೀಡ್) ಮಾಡುವ ವೇಳೆ ಚಾಲ್ತಿಯಲ್ಲಿದ್ದ ಪ್ರಕಾರ ಸ್ಟಾಂಪ್ ಶುಲ್ಕ ವಿನಾಯ್ತಿ ಮತ್ತು ನೋಂದಣಿ ಶುಲ್ಕಗಳಲ್ಲಿ ರಿಯಾಯ್ತಿ ಲಭ್ಯವಾಗುವುದು.</td></tr>
<tr><td>ಎಂಎಸ್ಎಂಇಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ</td><td>ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ</td><td>ವಲಯ 1 : 100%<br>ವಲಯ 2 : 100%<br>ವಲಯ 3 : 75%</td></tr>
<tr><td>ಎಂಎಸ್ಎಂಇಗಳಿಗೆ ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ</td><td>ವಲಯ 1 : 100% 7 ವರ್ಷದವರೆಗೆ<br>ವಲಯ 2 : 100% 6 ವರ್ಷದವರೆಗೆ<br>ವಲಯ 3 : ಇಲ್ಲ</td><td>ವಲಯ1 : 100% 8 ವರ್ಷದವರೆಗೆ<br>ವಲಯ 2 : 100% 7 ವರ್ಷದವರೆಗೆ<br>ವಲಯ 3 : 100% 4 ವರ್ಷದವರೆಗೆ</td></tr>
<tr><td>ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಶಕ್ತಿ ಸಬ್ಸಿಡಿ</td><td colspan="2">ವಲಯ 1 ಮತ್ತು 2ಕ್ಕೆ ಮಾತ್ರ; ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/-ರಂತೆ 3 ವರ್ಷಗಳ ಅವಧಿವರೆಗೆ ವಿದ್ಯುತ್‌ಶಕ್ತಿ ಸಬ್ಸಿಡಿ.</td></tr>
<tr><td>ಕುಶಲಕರ್ಮಿಗಳಿಗೆ ಬೆಂಬಲ</td><td colspan="2">1. ಕುಶಲಕರ್ಮಿಗಳಿಗೆ ಶೇ. 4% ಬಡ್ಡಿದರದಲ್ಲಿ ಅವಧಿ ಸಾಲ(ಟರ್ಮ್ ಲೋನ್) ಮತ್ತು ದುಡಿಮೆ ಬಂಡವಾಳ ಸಾಲ.<br>2. ಕುಶಲಕರ್ಮಿಗಳ ಕರಕುಶಲ ವಸ್ತುಗಳ ವಹಿವಾಟಿನ ಮೇಲೆ ಶೇ. 10%ರಷ್ಟು ಮಾರುಕಟ್ಟೆ ಅಭಿವೃದ್ಧಿ ನೆರವು (ಎಂಡಿಎ)<br>3. ಕರಕುಶಲ ಸಂಘಟನೆಗಳಿಗೆ, ಕರಕುಶಲ ಕಾಂಪ್ಲೆಕ್ಸ್‌ಗಳಿಗೆ,ಸಮೂಹ ಮೊದಲಾದವುಗಳಿಗೆ ಯಂತ್ರೋಪಕರಣಗಳು,ಬಿಡಿ ಭಾಗಗಳಿಗೆ 75% ಅನುದಾನ</td></tr>
</table>

ಕೋಷ್ಟಕ 9.1.2

| ಎಂಎಸ್‌ಎಂಇಗಳಿಗೆ ತಂತ್ರಜ್ಞಾನ ಅಳವಡಿಕೆ ಮತ್ತು ನವೋನ್ವೇಷಣೆ | | |
|---|---|---|
| | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ತಂತ್ರಜ್ಞಾನ ಮೇಲ್ದರ್ಜೆಗೇರಿಸುವ ಸಾಲದ ಮೇಲೆ ಬಡ್ಡಿ ಸಹಾಯಧನ | ವಲಯ1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ–ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್‌ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ | ವಲಯ 1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ–ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್‌ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ |
| ತಂತ್ರಜ್ಞಾನ ಅಳವಡಿಕೆಗೆ | ಎಲ್ಲಾ ವಲಯಗಳಿಗೆ<br>ವೆಚ್ಚದ 25% (ಗರಿಷ್ಠ ರೂ.50,000/–) ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ | ಎಲ್ಲಾ ವಲಯಗಳಿಗೆ<br>ವೆಚ್ಚದ 50% (ಗರಿಷ್ಠ ರೂ.1 ಲಕ್ಷ )ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ . |
| ತಂತ್ರಜ್ಞಾನ ವ್ಯವಹಾರ ವಿಕಸನ ಕೇಂದ್ರ (ಟಿಬಿಐಸಿ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಠ ರೂ.50.00 ಲಕ್ಷ) (ವಲಯ 1 ರಲ್ಲಿ ಕನಿಷ್ಠ 1 ಟಿಬಿಐಸಿ ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಠರೂ.60.00 ಲಕ್ಷ)(ವಲಯ 1 ರಲ್ಲಿ ಕನಿಷ್ಠ 1 ಟಿಬಿಐಸಿ ) |
| ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ | ಎಲ್ಲಾ ವಲಯಗಳಿಗೆ<br>ಐಎಸ್‌ಒ ಸರಣಿ ಪ್ರಮಾಣೀಕರಣ ವೆಚ್ಚದ 75%<br>(ಗರಿಷ್ಠ ರೂ.75,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಠ ರೂ.20,000/–) & 25% ವೆಚ್ಚ (ಗರಿಷ್ಠ ರೂ.50,000/– )ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ | ಎಲ್ಲಾ ವಲಯಗಳಿಗೆ<br>ಐಎಸ್‌ಒ ಸರಣಿ ಪ್ರಮಾಣೀಕರಣ ವೆಚ್ಚದ 75%<br>(ಗರಿಷ್ಠ ರೂ.1,00,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಠ ರೂ.25,000/–) & 25% ವೆಚ್ಚ (ಗರಿಷ್ಠ ರೂ.1,00,0000/–– )ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ |
| | ಮಹಿಳಾ ಮಾಲಿಕತ್ವದ ವಾಣಿಜ್ಯ ಉದ್ಯಮ(ಡಬ್ಲ್ಯುಬಿಇ) ವೀಕನೆಕ್ಟ್ ಪ್ರಮಾಣೀಕರಣ<br>ಎಲ್ಲಾ ವಲಯಗಳಿಗೆ<br>3 ವರ್ಷಗಳ ಅವಧಿವರೆಗೆ ಗರಿಷ್ಠ ರೂ.75,000/–<br>ಪ್ರಮಾಣಪತ್ರ ಶುಲ್ಕದ 100% ಮೊದಲ ವರ್ಷಕ್ಕೆ –ಗರಿಷ್ಠ ರೂ.30,000/–<br>ಪ್ರಮಾಣಪತ್ರ ಶುಲ್ಕದ 90% ಎರಡನೇ ವರ್ಷಕ್ಕೆ–ಗರಿಷ್ಠ ರೂ.27,000/–<br>ಪ್ರಮಾಣಪತ್ರ ಶುಲ್ಕದ 80% ಮೂರನೇ ವರ್ಷಕ್ಕೆ ಗರಿಷ್ಠ ರೂ 18,000/– | |

ಕೋಷ್ಟಕ 9.1.3

| ಎಂಎಸ್‌ಎಂಇಗಳ ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀಕರಣ | | |
|---|---|---|
| ಯಾವ ರೀತಿಯ ಬೆಂಬಲ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ : (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ಮಳೆ ನೀರು ಕೊಯ್ಲು | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.2 ಲಕ್ಷ ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.2.50 ಲಕ್ಷ ) |
| ತ್ಯಾಜ್ಯ ನೀರು ಸಂಸ್ಕರಣೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.7.50 ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.8.50 ಲಕ್ಷ ) |
| ನೀರಿನ ಲೆಕ್ಕ ಪರಿಶೋಧನೆ(ಆಡಿಟ್)ಗೆ ತಗುಲಿದ ವೆಚ್ಚ ಮರುಪಾವತಿ | ಎಲ್ಲಾ ವಲಯಗಳಿಗೆ<br>75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ<br>(ಒಂದು ಬಾರಿಗೆ) | ಎಲ್ಲಾ ವಲಯಗಳಿಗೆ<br>75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ<br>(ಒಂದು ಬಾರಿಗೆ) |
| ಶೂನ್ಯ ತ್ಯಾಜ್ಯ/ ಹೊರಸೂಸುವಿಕೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.7.50ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.8.50ಲಕ್ಷ) |

| ಎಂಎಸ್‌ಎಂಇಗಳ ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀಕರಣ | | |
|---|---|---|
| ಯಾವ ರೀತಿಯ ಬೆಂಬಲ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ಇಲೆಕ್ಟ್ರಾನಿಕ್ ತ್ಯಾಜ್ಯ ಮತ್ತು ಪ್ಲಾಸ್ಟಿಕ್ ತ್ಯಾಜ್ಯಗಳ ಮರುಬಳಕೆ | ಎಲ್ಲಾ ವಲಯಗಳಿಗೆ<br>ವಿಎಫ್‌ಎನ ಶೇ.5ರಷ್ಟು (ಗರಿಷ್ಠ ರೂ.10ಲಕ್ಷ) | ಎಲ್ಲಾ ವಲಯಗಳಿಗೆ<br>ವಿಎಫ್‌ಎನ ಶೇ.5ರಷ್ಟು (ಗರಿಷ್ಠ ರೂ.12ಲಕ್ಷ) |
| ತ್ಯಾಜ್ಯ ಸಂಸ್ಕರಣಾ ಘಟಕ(ಇಟಿಪಿ) ಸ್ಥಾಪನೆಗೆ ಸಹಾಯಧನ | ಎಲ್ಲಾ ವಲಯಗಳಿಗೆ<br>ಇಟಿಪಿಯ ವೆಚ್ಚದ ಶೇ.50 ರಷ್ಟು (ಗರಿಷ್ಠ ರೂ.50 ಲಕ್ಷ) | ಎಲ್ಲಾ ವಲಯಗಳಿಗೆ<br>ಇಟಿಪಿಯ ವೆಚ್ಚದ ಶೇ.75 ರಷ್ಟು (ಗರಿಷ್ಠ ರೂ.60 ಲಕ್ಷ) |

## 9.3 ಖಾಸಗಿ ಕೈಗಾರಿಕಾ ಪಾರ್ಕ್‌ಗೆ ಉತ್ತೇಜನ ಮತ್ತು ರಿಯಾಯಿತಿಗಳು

ಕರ್ನಾಟಕವು ಪ್ರಸ್ತುತ ಇರುವ ಕೈಗಾರಿಕಾ ತಳಹದಿಯನ್ನು ಇನ್ನಷ್ಟು ವಿಸ್ತರಿಸುವ ನಿಟ್ಟಿನಲ್ಲಿ ಖಾಸಗಿ ಕೈಗಾರಿಕಾ ಪಾರ್ಕ್ ಸ್ಥಾಪಿಸಲು ಹೂಡಿಕೆದಾರರಿಗೆ ಅನುವು ಮಾಡಿಕೊಡುತ್ತಿದೆ. ನೀತಿಯ ಅವಧಿಯಲ್ಲಿ ಅರ್ಹ ಖಾಸಗಿ ಇಂಡಸ್ಟ್ರಿಯಲ್ ಪಾರ್ಕ್‌ಗೆ ಈ ಕೆಳಗಿನ ಉತ್ತೇನ ಮತ್ತು ರಿಯಾಯಿತಿಗಳ ಪ್ಯಾಕೇಜ್‌ನ್ನು ಮಂಜೂರು ಮಾಡಲಾಗುವುದು:

**ಕೋಷ್ಟಕ 9.3.1**

| ಖಾಸಗಿ ಕೈಗಾರಿಕಾ ಪಾರ್ಕ್ – ಡೆವಲಪರ್ | |
|---|---|
| ಯಾವ ರೀತಿಯ ಬೆಂಬಲ | ಎಲ್ಲಾ ಪ್ರವರ್ಗಗಳಿಗೆ |
| ಸ್ಟಾಂಪ್ ಶುಲ್ಕದಿಂದ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ | ಖಾಸಗಿ ಕೈಗಾರಿಕಾ ಪಾರ್ಕ್ ಅಭಿವೃದ್ಧಿಪಡಿಸಲು ಎಲ್ಲಾ ವಲಯಗಳಲ್ಲಿಯೂ ಅಭಿವೃದ್ಧಿದಾರರಿಗೆ ಸಾಲಪತ್ರಗಳಿಗೆ ಮತ್ತು ಖರೀದಿಸಿದ ಭೂಮಿಯ ಲೀಸ್ ಡೀಡ್ಸ್, ಲೀಸ್ ಕಮ್ ಸೇಲ್ ಡೀಡ್ ಮತ್ತು ಶುದ್ಧ ಕ್ರಯಪತ್ರ ನೋಂದಣಿಗೆ ಶೇ.100ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕದಲ್ಲಿ ರೂ.1000/– ಗಳಿಗೆ ರೂ.1/–ರಂತೆ ಶುಲ್ಕ ಪಾವತಿಸುವುದು. |
| ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕ(ಸಿಇಟಿಪಿ)/ ಕೈಗಾರಿಕೆಗಳ ಅಪಾಯಕಾರಿ ತ್ಯಾಜ್ಯ ವಿಲೇವಾರಿ ಯೋಜನೆಗಳಿಗೆ ಸಹಾಯಧನ | ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕ(ಸಿಇಟಿಪಿ)ಗಳಿಗೆ ವೆಚ್ಚದ ಶೇ.50 ರಷ್ಟು, ಗರಿಷ್ಠ ರೂ.500 ಲಕ್ಷ ವರೆಗೆ ಬಂಡವಾಳ ಸಹಾಯಧನ. ಎಲ್ಲಾ ವಲಯಗಳಲ್ಲಿಯೂ ಅನ್ವಯವಾಗುವಂತೆ. |
| ಸಂಸ್ಕರಣಾ ಘಟಕ (ಎಸ್‌ಟಿಪಿ) ಸ್ಥಾಪನೆಗೆ ಸಹಾಯಧನ | ಎಸ್‌ಟಿಪಿವೆಚ್ಚದ 50% ಒಂದು ದಾರಿ ಬಂಡವಾಳ ಸಹಾಯಧನ,ಗರಿಷ್ಠ ಮಿತಿ ರೂ.1.00ಕೋಟಿ ಎಲ್ಲಾ ವಲಯಗಳಿಗೆ ಅನ್ವಯವಾಗುವಂತೆ. |
| ಎಂಎಸ್‌ಎಂಇಗಳಿಗೆ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳ ಪ್ಯಾಕೇಜ್‌ಗಳಿಗೆ ಹೆಚ್ಚುವರಿಯಾಗಿ ಖಾಸಗಿ ಕೈಗಾರಿಕಾ ಪಾರ್ಕ್‌ನೊಳಗೆ ಸ್ಥಾಪಿತವಾಗುವ ಸೂಕ್ಷ್ಮ ಮತ್ತು ಸಣ್ಣ ಘಟಕಗಳಿಗೆ ಪ್ರೋತ್ಸಾಹ | |
| ಭೂಮಿ ಸಬ್ಸಿಡಿ | ವಲಯ 1 ಮತ್ತು 2ಕ್ಕೆ ಮಾತ್ರ ಅನ್ವಯಿಸಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಖಾಸಗಿ ಕೈಗಾರಿಕಾ ಪ್ರದೇಶಗಳು/ ಪಾರ್ಕ್‌ಗಳು/ ವಸಾಹತುಗಳು/ ಬಹುಮಹಡಿ ಸಂಕೀರ್ಣಗಳ ಕಾರ್ಖಾನೆಗಳಿಗೆ ಆಸ್ತಿ ಮಾರ್ಗಸೂಚಿ ದರದ (ಗೈಡೆನ್ಸ್ ವ್ಯಾಲ್ಯೂ) 25% ಗರಿಷ್ಠ 1 ಎಕರೆಗೆ ಅನ್ವಯಿಸಿ ವಿಶೇಷ ಭೂ ಸಬ್ಸಿಡಿ. ಇಂತಹ ಪ್ರಕರಣಗಳಲ್ಲಿ ಸ್ಥಿರಾಸ್ತಿ ಮೌಲ್ಯ(ವಿಎಫ್‌ಎ) ಅಡಿಯಲ್ಲಿ ಭೂಮಿಯ ಮೌಲ್ಯವನ್ನು ಇನ್ನಾವುದೇ ಪ್ರೋತ್ಸಾಹಧನವನ್ನು ವಿಎಫ್‌ಗೆ ಹೊಂದಿಕೊಂಡಂತೆ ಮಂಜೂರು ಮಾಡಲು ಪರಿಗಣಿಸಬಾರದು |
| ನೀರಿನ ದರ | ಖಾಸಗಿಕೈಗಾರಿಕಾ ಪ್ರದೇಶಗಳ/ ಪಾರ್ಕ್‌ಗಳು/ ವಸಾಹತುಗಳಲ್ಲಿ,ಬಹುಮಹಡಿ ಸಂಕೀರ್ಣಗಳ ಕಾರ್ಖಾನೆಗಳಲ್ಲಿ ಸ್ಥಾಪಿಸಲಾಗಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಬಳಕೆ ಮಾಡುವ ತೃತೀಯ ಹಂತದಲ್ಲಿ ಸಂಸ್ಕರಿಸಿದ ನೀರಿಗೆ ವೈಯಕ್ತಿಕವಾಗಿ ಕಾರ್ಯಾಚರಣೆ ನಡೆಸುವ ಕೈಗಾರಿಕೆಗಳಿಗೆ ಮೊದಲ 5 ವರ್ಷಗಳ ಕಾಲ ಒಂದು ಯೂನಿಟ್ ನೀರಿಗೆ (ಕೆಎಲ್‌ಡಿ) ರೂ.15/–ರಂತೆ ಸಬ್ಸಿಡಿ ನೀಡಲಾಗುವುದು. ಖಾಸಗಿ ಕೈಗಾರಿಕಾ ಪ್ರದೇಶ/ಪಾರ್ಕ್‌ಗಳು/ವಸಾಹತುಗಳು/ಬಹು ಮಹಡಿ ಸಂಕೀರ್ಣಗಳ ಕೈಗಾರಿಕೆಗಳು ಹಾಗೂ ಡೆವಲಪರ್ ಇಂತಹ ಕೈಗಾರಿಕೆಗಳಿಗೆ ಸರಬರಾಜು ಮಾಡಿದಲ್ಲಿ ಅನ್ವಯವಾಗುವುದು. |
| ಸಿಇಟಿಪಿ ದರ | ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕಗಳ ನಿರಂತರ ಬಳಕೆಗೆ ಯುನಿಟ್‌ಗೆ ರೂ.15/– ಹೊರಸೂಸುವ ತ್ಯಾಜ್ಯದ ಮರುಸಂಸ್ಕರಣೆಗೆ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಕೈಗಾರಿಕೆಗಳು ಆರಂಭಗೊಂಡ ಮೊದಲ 5ವರ್ಷಗಳವರೆಗೆ ಸಬ್ಸಿಡಿ ನೀಡಲಾಗುವುದು. |
| ಅಂತರಾಷ್ಟ್ರೀಯ ಕೈಗಾರಿಕಾ ಪಾರ್ಕ್‌ಗಳು ಸೇರಿದಂತೆ ಖಾಸಗಿ ಕೈಗಾರಿಕಾ ಪಾರ್ಕ್‌ಗಳಿಗೆ ಹೂಡಿಕೆ ಉತ್ತೇಜನ ಸಬ್ಸಿಡಿ | |
| ಹೂಡಿಕೆ ಉತ್ತೇಜನ ಸಬ್ಸಿಡಿ | ಎಲ್ಲಾ ವಲಯಗಳಲ್ಲಿ ಕಟ್ಟಡ ಮತ್ತು ಮೂಲ ಸೌಕರ್ಯ ಸೌಲಭ್ಯಗಳ ಮೇಲೆ ಅರ್ಹ ನಿಗದಿತ ಬಂಡವಾಳ ಹೂಡಿಕೆಯ 5% ಸಹಾಯಧನ. |

## ಅನುಬಂಧ-2: ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿಗಾಗಿ ಇರುವ ಕಾರ್ಯಕ್ರಮಗಳು

### 1. ಪ್ರಧಾನಮಂತ್ರಿಯವರ ಉದ್ಯೋಗ ಸೃಜನ ಯೋಜನೆ

ನಗರ / ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ / ಯುವತಿಯರು ಕಿರು ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಸ್ವಯಂ ಉದ್ಯೋಗವನ್ನು ಉತ್ತೇಜಿಸಲು ವಿವಿಧ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ, ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮೂಲಕ ಸಾಲ ಮತ್ತು ಸಹಾಯಧನದ ನೆರವು ಒದಗಿಸುವ ಯೋಜನೆಯಾಗಿದೆ.

1. **ತಯಾರಿಕಾ ಮತ್ತು ಸೇವಾ ಚಟುವಟಿಕೆಗಳಿಗೆ ಗರಿಷ್ಠ ಯೋಜನ ವೆಚ್ಚ :** ಅನುಕ್ರಮವಾಗಿ ರೂ.25 ಲಕ್ಷ ಮತ್ತು ರೂ.10.00ಲಕ್ಷ

2. **ಶೈಕ್ಷಣಿಕ ವಿದ್ಯಾರ್ಹತೆ:** ರೂ.10 ಲಕ್ಷ ಮೇಲ್ಪಟ್ಟ ಯೋಜನಾ ವೆಚ್ಚದ ತಯಾರಿಕಾ / ರೂ.5 ಲಕ್ಷ ಮೇಲ್ಪಟ್ಟ ಯೋಜನಾ ವೆಚ್ಚದ ಸೇವಾ ಚಟುವಟಿಕೆಗಳಿಗೆ ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ ಉತ್ತೀರ್ಣರಾಗಿರಬೇಕು.

3. **ವಯಸ್ಸು :** ಕನಿಷ್ಠ 18 ವರ್ಷ ತುಂಬಿರಬೇಕು,

4. **ಫಲಾನುಭವಿಗಳ ಆಯ್ಕೆ:** ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗುವ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ, ಸಾಲ ಮಂಜೂರಾತಿಗಾಗಿ ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಲಾಗುವುದು.

5. **ಅರ್ಜಿದಾರರು ಸಲ್ಲಿಸಬೇಕಾದ ದಾಖಲಾತಿಗಳು:**
   - ಆಧಾರ್ ಕಾರ್ಡ್
   - ಜಾತಿ ಪ್ರಮಾಣ ಪತ್ರ
   - ಶೈಕ್ಷಣಿಕ ವಿದ್ಯಾರ್ಹತೆ ದೃಡೀಕರಿಸುವ ಪ್ರಮಾಣ ಪತ್ರ (ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ)
   - ಅರ್ಜಿದಾರರು ಮಾಜಿಸೈನಿಕ/ಅಂಗವಿಕಲರಾಗಿದ್ದಲ್ಲಿ ಸಂಬಂಧಿಸಿದ ಪ್ರಮಾಣ ಪತ್ರ
   - ಯೋಜನಾ ವರದಿ
   - ಗ್ರಾಮೀಣ ಪ್ರದೇಶದಲ್ಲಿ ಘಟಕ ಸ್ಥಾಪಿಸಲು ಇಚ್ಛಿಸಿದ್ದಲ್ಲಿ ಜನಸಂಖ್ಯೆ ಪ್ರಮಾಣ ಪತ್ರ

6. **ಪ್ರವರ್ತಕರ ವಂತಿಕೆ & ಸರ್ಕಾರದಿಂದ ಸಹಾಯಧನ (ರೂ.ಲಕ್ಷಗಳಲ್ಲಿ)**

| ಫಲಾನುಭವಿಗಳ ವರ್ಗೀಕರಣ | ಯೋಜನಾ ವೆಚ್ಚದಲ್ಲಿ ಪ್ರವರ್ತಕರ ವಂತಿಗೆ | ಯೋಜನಾ ವೆಚ್ಚದ ಮೇಲೆ ಅರ್ಹತೆಯಿರುವ ಸಹಾಯಧನ | |
|---|---|---|---|
| | | ನಗರ | ಗ್ರಾಮೀಣ |
| ಸಾಮಾನ್ಯ ವರ್ಗ | ಶೇ.10% | ಶೇ. 15% (ಗರಿಷ್ಟ ರೂ.3.75 ಲಕ್ಷ) | ಶೇ. 25% (ಗರಿಷ್ಟ ರೂ.6.25 ಲಕ್ಷ) |
| ಪರಿಶಿಷ್ಟ ಜಾತಿ/ ಪರಿಶಿಷ್ಠ ಪಂಗಡ/ ಹಿಂದುಳಿದವರು/ ಅಲ್ಪಸಂಖ್ಯಾತರು/ ಮಹಿಳೆ/ ಮಾಜಿ ಯೋಧರು/ ಅಂಗವಿಕಲರು | ಶೇ.5% | ಶೇ. 25% (ಗರಿಷ್ಟ ರೂ.6.25 ಲಕ್ಷ) | ಶೇ. 35% (ಗರಿಷ್ಟ ರೂ.8.75 ಲಕ್ಷ) |

7. **ಚಟುವಟಿಕೆಗಳು:**
   ಅನರ್ಹ ಚಟುವಟಿಕೆಗಳನ್ನು ಹೊರತುಪಡಿಸಿ ಆರ್ಥಿಕವಾಗಿ ಸದೃಢವಾಗುವ ಎಲ್ಲಾ ತಯಾರಿಕಾ ಮತ್ತು ಸೇವಾ ಚಟುವಟಿಕೆಗಳು ಮಾತ್ರ ಈ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯಲು ಅರ್ಹವಾಗಿರುತ್ತವೆ.

8. **ಆದಾಯದ ಮಿತಿ:**
   ಈ ಯೋಜನೆಯಡಿಯಲ್ಲಿ ಉದ್ದಿಮೆಗಳನ್ನು ಸ್ಥಾಪಿಸಲು ಸಾಲ ಸೌಲಭ್ಯ ಪಡೆಯಲು ಯಾವುದೇ ಆದಾಯದ ಮಿತಿ ಇರುವುದಿಲ್ಲ.

9. **ಇತರೆ ಷರತ್ತುಗಳು:**
   ಈ ಯೋಜನೆಯಡಿಯಲ್ಲಿ ಪ್ರಥಮ ಪೀಳಿಗೆ ಉದ್ಯಮಶೀಲರುಗಳು ಪ್ರಾರಂಭಿಸುವ ಹೊಸ ಘಟಕಗಳಿಗೆ ಮಾತ್ರ ಸಹಾಯಧನ ಲಭ್ಯವಿದೆ. ಒಂದು ಕುಟುಂಬದ ಒಬ್ಬರಿಗೆ ಮಾತ್ರ ಸಾಲ ಪಡೆಯಲು ಅವಕಾಶವಿರುತ್ತದೆ. (ಕುಟುಂಬ ಎಂದರೆ ಸ್ವಯಂ ಮತ್ತು ಸಂಗಾತಿ). ವಿಸ್ತರಣೆ/ಆಧುನೀಕರಣ/ವೈವಿಧ್ಯಿಕರಣ ಘಟಕಗಳಿಗೆ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹತೆ ಇರುವುದಿಲ್ಲ. ಇತರೆ ಯೋಜನೆಗಳಲ್ಲಿ ಸಾಲ ಮತ್ತಿತ್ತರ ಸೌಲಭ್ಯ ಪಡೆದ ಘಟಕಗಳು/ ಉದ್ಯಮಶೀಲರು ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಹತೆ ಇರುವುದಿಲ್ಲ.

10. **ಅನರ್ಹ ಚಟುವಟಿಕೆಗಳು:**
    1. ಮಾಂಸಾಧಾರಿತ ತಯಾರಿಕಾ / ಸೇವಾ ಘಟಕಗಳು (ಸಂಸ್ಕರಣೆ, ಕ್ಯಾನಿಂಗ್), ಬೀಡಿ, ಸಿಗಾರ್, ಪಾನ್ ಘಟಕಗಳು, ಮದ್ಯ ತಯಾರಿಕೆ /ಮಾರಾಟ ಮಳಿಗೆ, ಮಧ್ಯ ಸರಬರಾಜು ಮಾಡುವ ಹೋಟೆಲ್/ಡಾಬಾ, ತಂಬಾಕು ಬಳಕೆ ಆಧಾರಿಕ ಕೈಗಾರಿಕೆಗಳು
    2. ಪಶುಸಂಗೋಪನೆ (ಕೋಳಿಸಾಕಾಣಿಕೆ, ಹಂದಿ ಸಾಕಾಣಿಕೆ ಇತ್ಯಾದಿ),

3. ರೇಷ್ಮೆ ಕೃಷಿ, ತೋಟಗಾರಿಕೆ,ಟೀ, ಕಾಫಿ, ಇತ್ಯಾದಿ ಪ್ಲಾಂಟೇಷನ್. ಇದರ ಮೌಲ್ಯವರ್ಧಿತ ಉತ್ಪನ್ನಗಳ ಚಟುವಟಿಕೆಗಳನ್ನು ಕೈಗೊಳ್ಳಬಹುದು.
4. 20 ಮೈಕ್ರಾನ್‌ಗಿಂತ ತೆಳ್ಳನೆಯ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳ ತಯಾರಿಕೆ, ಪರಿಸರ ಮಾಲಿನ್ಯ ಮಾಡುವ ಇತರೆ ಉತ್ಪನ್ನಗಳ ತಯಾರಿಕೆ. ಪಾಶ್ಮಿನಾ ಉಣ್ಣೆ ಸಂಸ್ಕರಣೆ, ಗ್ರಾಮೀಣ ಸಾರಿಗೆ

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗಿರುವ ಯೋಜನೆಗಳು:

### 1. ಆಧುನೀಕರಣ / ತಾಂತ್ರಿಕ ತರಬೇತಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ನಿರುದ್ಯೋಗಿ ಯುವ ಜನರಿಗೆ ಇಲಾಖೆ ವತಿಯಿಂದ ಸ್ಥಾಪಿತವಾದ/ಪ್ರಾಯೋಜಿತವಾದ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳ ಮೂಲಕ ಕೈಗಾರಿಕೆಗೆ ಅವಶ್ಯಕತೆ ಇರುವ ಮಾನವ ಸಂಪನ್ಮೂಲ ಒದಗಿಸಲು ಉದ್ಯೋಗಾವಕಾಶ ಕಲ್ಪಿಸಲು ಹಾಗೂ ಸ್ವಯಂ ಉದ್ಯೋಗ ಸ್ಥಾಪನೆಗಾಗಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲಾಗುವುದು.

- ವಿದ್ಯಾರ್ಹತೆ ಮತ್ತು ವಯಸ್ಸು: ಎಸ್‌ಎಸ್‌ಎಲ್‌ಸಿ ಉತ್ತೀರ್ಣ/ ಅನುತ್ತೀರ್ಣ ,ಕನಿಷ್ಠ 16 ವರ್ಷ ಗರಿಷ್ಠ 45 ವರ್ಷ
- ತರಬೇತಿಯ ಅವಧಿ: 03, 04 ಮತ್ತು 6 ತಿಂಗಳು
- ತರಬೇತಿ ಶಿಷ್ಯವೇತನ: **ಮಾಹೆಯಾನ ರೂ.2500.00**

### 2. ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳ ಸೌಲಭ್ಯ ಕಾರ್ಯಕ್ರಮ:

ಸರ್ಕಾರದಿಂದ ಯಾವುದೇ ಯೋಜನೆಯಡಿಯಲ್ಲಿ ವೃತ್ತಿನಿರತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳ ಸೌಲಭ್ಯಗಳನ್ನು ಪಡೆಯದೇ ಇರುವ ವಸತಿರಹಿತ ಕುಶಲಕರ್ಮಿಗಳಿಗೆ ಕೆಳಕಂಡ ವೃತ್ತಿಗಳಲ್ಲಿ ನಿರಂತರವಾಗಿ ತೊಡಗಿದವರನ್ನು ಮಾತ್ರ ಆಯ್ಕೆ ಮಾಡಲಾಗುವುದು

| ಸಂ. | ವೃತ್ತಿಯ ಹೆಸರು | ಸಂ. | ವೃತ್ತಿಯ ಹೆಸರು |
|---|---|---|---|
| 01 | ಬಿದಿರು ಕೆಲಸ | 11 | ಖಾದಿ ಕೈಮಗ್ಗ ನೇಯ್ಗೆಗಾರರು (ಹತ್ತಿ, ರೇಷ್ಮೆ, ಪಾಲಿಸ್ಟರ್) |
| 02 | ಬೆತ್ತದ ಕೆಲಸ | 12 | ನೂಲುಗಾರರು |
| 03 | ಬಡಗಿ ಕೆಲಸ | 13 | ಕೌದಿ ಹೊಲೆಯುವುದು |
| 04 | ಕಮ್ಮಾರಿಕೆ | 14 | ಚಾಪೆ ಹೆಣೆಯುವುದು |
| 05 | ಚರ್ಮಗಾರಿಕೆ | 15 | ಬುಟ್ಟಿ ಹೆಣೆಯುವುದು |
| 06 | ಕರಕುಶಲ ವಸ್ತು ತಯಾರಿಕೆ | 16 | ತೆಂಗಿನ ನಾರಿನ ಹಗ್ಗ ಮಾಡುವುದು (ಪ್ಲಾಸ್ಟಿಕ್ ಹೊರತುಪಡಿಸಿ) |
| 07 | ತೆಂಗಿನ ನಾರಿನ ಉತ್ಪನ್ನ ತಯಾರಿಕೆ | 17 | ಅಗರಬತ್ತಿ |
| 08 | ಕುಂಬಾರಿಕೆ | 18 | ಕಸೂತಿ, ಎಂಬ್ರಾಯಡರಿ |
| 09 | ಜೀನ್ಸ್ ಹೊಲಿಗೆ | 19 | ಎತ್ತಿನ ಗಾಡಿ ತಯಾರಿಕೆ |
| 10 | ಬೆಳ್ಳಿ/ಬಂಗಾರ ಆಭರಣಗಳ ತಯಾರಿಕೆ | 20 | ಕಲ್ಲಿನ ಕೆತ್ತನೆ |

ಮೇಲಿನ ವೃತ್ತಿಗಳನ್ನು ಹೊರತುಪಡಿಸಿ ಬೇರೆ/ಇತರೆ ವೃತ್ತಿಯಲ್ಲಿ ತೊಡಗಿರುವ ಕುಶಲಕರ್ಮಿಗಳಿಗೆ ಈ ಸೌಲಭ್ಯ ನೀಡಬೇಕಾದಲ್ಲಿ ಕಡ್ಡಾಯವಾಗಿ ಕೇಂದ್ರ ಕಛೇರಿಯಿಂದ ಅನುಮೋದನೆ ಪಡೆಯುವುದು.

ಫಲಾನುಭವಿಗಳನ್ನು ಗುರುತಿಸಿ ಅವರಿಂದ ಪಡೆಯುವ ದಾಖಲಾತಿಗಳು. ಜಾತಿ ಪ್ರಮಾಣ ಪತ್ರ, ನಿವೇಶನ ಹಕ್ಕು ಪತ್ರ, ಕುಶಲಕರ್ಮಿ ಪ್ರಮಾಣ ಪತ್ರ (ಪಂಚಾಯಿತಿ/ಪುರಸಭೆಯಿಂದ), ವಸತಿ ಇಲ್ಲದಿರುವ ಬಗ್ಗೆ ದೃಢೀಕರಣ ಪತ್ರ (ತಾಲ್ಲೂಕು ಪಂಚಾಯಿತಿಯಿಂದ), ಸಕ್ಷಮ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ, ಕಟ್ಟಡ ನಿರ್ಮಾಣಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಪರವಾನಗಿ ಪತ್ರ

**ವಸತಿ ಕಾರ್ಯಾಗಾರದ ಯೋಜನಾ ವೆಚ್ಚದ ವಿವರ:**
ವಸತಿ ಕಾರ್ಯಾಗಾರ ಯೋಜನೆಯಡಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರತಿ ಘಟಕದ ವೆಚ್ಚ ಅನುಕ್ರಮವಾಗಿ ರೂ.3.00 ಲಕ್ಷ ಮತ್ತು ರೂ.3.25 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಇದರಲ್ಲಿ ರಾಜೀವ್ ಗಾಂಧಿ ಗ್ರಾಮೀಣ ನಿಗಮದ ಮೂಲಕ ಕ್ರಮವಾಗಿ ರೂ.1.75 ಲಕ್ಷ ಮತ್ತು ರೂ.2.00 ಲಕ್ಷ ಭರಿಸಲಾಗುವುದು. ರೂ.1.00 ಲಕ್ಷ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಹಾಯಧನ ಮತ್ತು ಫಲಾನುಭವಿಗಳು ರೂ.25,000/– ಭರಿಸಬೇಕಾಗಿರುತ್ತದೆ.

### 3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ / ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ರವರುಗಳಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳಿಗೆ ರಿಯಾಯಿತಿ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಹಂಚಿಕೆಯಾಗುವ ಕೈಗಾರಿಕಾ ನಿವೇಶನ/ಪ್ಲಾಟ್/ಶೆಡ್‌ಗಳನ್ನು ಶೇ.75 ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.

- ಹಂಚಿಕೆಯಾಗುವ ಕೈಗಾರಿಕಾ ನಿವೇಶನಗಳನ್ನು ಮೂಲಭೂತ ಸೌಕರ್ಯ ಕಲ್ಪಿಸಿ ಪೂರ್ಣ ಪ್ರಮಾಣದಲ್ಲಿ ಉದ್ದಿಮೆ ಸ್ಥಾಪನೆಗೆ ಗರಿಷ್ಠ 3 ವರ್ಷಗಳ ಕಾಲಾವಕಾಶ ನೀಡುವುದು.
- ಹಂಚಿಕೆ ಪತ್ರದಲ್ಲಿನ ಮೊತ್ತದ ಶೇ.10ರಷ್ಟು ಮೊತ್ತವನ್ನು ಮಾತ್ರ ಪಾವತಿಸಿ ನಂತರ ನಿವೇಶನವನ್ನು ಫಲಾನುಭವಿಗೆ ಸ್ವಾಧೀನ ಪತ್ರದ ಮೂಲಕ ನೀಡಿ ಉಳಿದ ಶೇ.15ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ನಿಗಮ ಹಾಗೂ ಮಂಡಳಿಯು ಫಲಾನುಭವಿಯಿಂದ ವಸೂಲಾತಿ ಮಾಡಿಕೊಳ್ಳತಕ್ಕದ್ದು.
- ಕೈಗಾರಿಕಾ ನಿವೇಶನವನ್ನು 10 ವರ್ಷಗಳ ಅವಧಿಗೆ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡುವುದು ಹಾಗೂ ಈ ಅವಧಿಯಲ್ಲಿ ವರ್ಗಾಯಿಸಲು ಸಾಧ್ಯವಿಲ್ಲ.
- ನಿವೇಶನ (ಎ&ಬಿ ಶೆಡ್ ಸ್ಟೆರಿ) ನೀಡುವ ದರದಲ್ಲಿ 75%ರಷ್ಟು ಅಥವಾ ಗರಿಷ್ಠ ರೂ.2.00 ಕೋಟಿ ಸಹಾಯಧನ ಮಿತಿಯೊಳಗೆ ಯಾವುದು ಕಡಿಮೆಯೋ ಅದನ್ನು ನೀಡುವುದು. ಉಳಿದ ವೆಚ್ಚವನ್ನು ಫಲಾನುಭವಿಗಳು ಭರಿಸುವುದು.
- 75% ರಷ್ಟು ಸಹಾಯಧನದ ಯೋಜನೆಯು ಹೊಸದಾಗಿ ಕೈಗಾರಿಕಾ ನಿವೇಶನ ಹಂಚಿಕೆ ಮಾಡುವ ಪ್ರಕರಣಗಳಿಗೆ ಅನ್ವಯಿಸುತ್ತದೆ. ಆದರೆ, 2019–20ನೇ ಸಾಲಿನಲ್ಲಿ 50% ಸಹಾಯಧನ ಯೋಜನೆಯಡಿ ಈಗಾಗಲೇ ಕೈಗಾರಿಕಾ ನಿವೇಶನಗಳನ್ನು ಪಡೆದು ನಿಯಮಾನುಸಾರ ಒಡಂಬಡಿಕೆ ಮತ್ತು ಪಾವತಿ ಇತ್ಯಾದಿ ಮಾಡಿರುವ ಪ್ರಕರಣಗಳನ್ನು ಅದೇ ಮಿತಿಯಲ್ಲಿ ಮುಂದುವರೆಸುವುದು.
- ಭೂ ಸಹಾಯಧನ ಹೊರತುಪಡಿಸಿದ ಇತರೆ ಸಹಾಯಧನ/ರಿಯಾಯಿತಿಗಳನ್ನು ಚಾಲ್ತಿಯಲ್ಲಿರುವ ಕೈಗಾರಿಕಾ ನೀತಿಯ ಪ್ರಕಾರ ನೀಡುವುದು.

## 4. ಗುಡಿ ಮತ್ತು ಸೂಕ್ಷ್ಮ ಕೈಗಾರಿಕಾ ಘಟಕಗಳು / ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಸಹಾಯಧನ ಕಾರ್ಯಕ್ರಮ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಗುಡಿ ಮತ್ತು ಅತೀ ಸೂಕ್ಷ್ಮ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಹಣಕಾಸು ಸಂಸ್ಥೆಗಳಿಂದ ಸಾಲದ ಮಂಜೂರಾತಿ ಪಡೆದ ನಂತರ ಇಲಾಖೆಯಿಂದ ಈ ಯೋಜನೆಯಡಿ ಅರ್ಹ ಸಹಾಯಧನ ಮಂಜೂರು ಮಾಡಿ, ಸಾಲದ ಮೊದಲನೇ ಕಂತು ಬಿಡುಗಡೆಯಾದ ಮೇಲೆ ಸದರಿ ಸಹಾಯಧನ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು.

**ಅರ್ಹತೆ:**

- ಘಟಕವನ್ನು ಪ್ರಾರಂಭಿಸುವ ಉದ್ದಿಮೆದಾರರು ಕನಿಷ್ಠ 18 ವರ್ಷ ವಯೋಮಾನ ಪೂರೈಸಿರಬೇಕು
- ಹೊಸ/ವಿಸ್ತರಣಾ/ಆಧುನೀಕರಣ ಘಟಕಗಳಿಗೆ ಈ ಯೋಜನೆಯಡಿ ಸಹಾಯಧನ ದೊರಕುವುದು.
- ಘಟಕಗಳು ಕೈಗಾರಿಕಾ ಅಥವಾ ಸೇವಾ ಚಟುವಟಿಕೆಯಡಿ ಕೈಗಾರಿಕೆ ಸ್ಥಾಪಿಸುವುದು.
- ಕೈಗಾರಿಕಾ ಅಥವಾ ಸೇವಾ ಚಟುವಟಿಕೆಗಳ ಸ್ಥಾಪನೆಗೆ ಯೋಜನಾ ವೆಚ್ಚದ ಮೇಲೆ ಮಂಜೂರಾಗುವ ಸಾಲದ ಆಧಾರದ ಮೇಲೆ ಸಹಾಯಧನ ಮಂಜೂರು ಮಾಡಲಾಗುವುದು.
- ಫಲಾನುಭವಿಯು ಈ ಹಿಂದೆ ಸಾಲ ಪಡೆದು ಸುಸ್ತಿದಾರರಾಗಿರತಕ್ಕದ್ದಲ್ಲ.
- ಫಲಾನುಭವಿಯು ಸರ್ಕಾರದ ಇತರ ಯಾವುದೇ ಯೋಜನೆಯಡಿ ರಿಯಾಯಿತಿ / ಪ್ರೋತ್ಸಾಹ ಪಡೆದಿರತಕ್ಕದ್ದಲ್ಲ.

**ವಿಶೇಷ ಸೂಚನೆ:** ಕೇವಲ ದುಡಿಮೆ ಬಂಡವಾಳ ಪಡೆದ ಘಟಕಗಳು ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.

**ಸಲ್ಲಿಸಬೇಕಾದ ದಾಖಲಾತಿಗಳ ವಿವರಗಳು.**

| | |
|---|---|
| 1. ನಿಗಧಿತ ನಮೂನೆಯಲ್ಲಿ ಅರ್ಜಿ | 2. ಎಸ್‌ಸಿ/ಎಸ್‌ಟಿ ಜಾತಿ ಪ್ರಮಾಣ ಪತ್ರ |
| 3. ಭೂಮಿ/ನಿವೇಶನದ ದಾಖಲಾತಿ ಪತ್ರ. | 4. ಕಟ್ಟಡ ಬಾಡಿಗೆ ಇದ್ದಲ್ಲಿ ಬಾಡಿಗೆ ಕರಾರು ಪತ್ರ |
| 5. ಬ್ಯಾಂಕಿನಿಂದ ಸಾಲ ಮಂಜೂರಾದ ಪತ್ರ | 6. ಇಲಾಖೆಯಿಂದ ಪಡೆದಿರುವ ಉದ್ಯೋಗ್ ಆಧಾರ್ ಮೆಮೊರಾಂಡಮ್ |
| 7. ಯೋಜನಾ ಸ್ಥೂಲ ವರದಿ | |

**ಅರ್ಹ ಸಹಾಯಧನ ಮೊತ್ತ:**

- ಪ್ರವರ್ತಕರು ಯೋಜನಾ ವೆಚ್ಚದ ಶೇ.10 ರಷ್ಟನ್ನು ಭರಿಸಬೇಕು.
- ಯೋಜನಾ ವೆಚ್ಚದ ಶೇ.90 ರಷ್ಟನ್ನು ಹಣಕಾಸು ಸಂಸ್ಥೆ / ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಗಳಿಂದ ಯೋಜನೆಗೆ ಪಡೆಯುವುದು.
- ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್‌ಗಳಿಂದ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಮಂಜೂರಾದ ಸಾಲದ ಮೇಲೆ, ಇಲಾಖೆ ವತಿಯಿಂದ ರೂ.10.00ಲಕ್ಷ ಮೀರದಂತೆ ಇರುವ ಯೋಜನೆಗಳಿಗೆ ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಠ ರೂ.5.00 ಲಕ್ಷಗಳವರೆಗೂ ಸಹಾಯಧನವನ್ನು ಮಂಜೂರು ಮಾಡಲಾಗುವುದು.

**ಆಯ್ಕೆ ವಿಧಾನ:**
ದಾಖಲಾತಿಗಳನ್ನು ಘಟಕಗಳಿಂದ ಪಡೆದು ಸಹಾಯಧನ ಮಂಜೂರು ಸಮಿತಿಯು ಆಗಿಂದಾಗ್ಗೆ ಸಭೆ ಸೇರಿ ಪರಿಶೀಲಿಸಿ ಅರ್ಹ ಪ್ರಸ್ತಾವನೆಗಳನ್ನು ಸಹಾಯಧನ ಮಂಜೂರು ಮಾಡಿ ಸಂಬಂಧಪಟ್ಟ ಹಣಕಾಸು ಸಂಸ್ಥೆ/ ಬ್ಯಾಂಕ್‌ಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಲು ಕಳುಹಿಸಲಾಗುವುದು.

**ಸಹಾಯಧನ ಬಿಡುಗಡೆ ವಿಧಾನ:**

- ಜಂಟಿ ನಿರ್ದೇಶಕರು ಬಿಡುಗಡೆ ಮಾಡಲಾಗುವ ಸಹಾಯಧನವನ್ನು ಸಂಬಂಧಪಟ್ಟ ಹಣಕಾಸು ಸಂಸ್ಥೆ/ಬ್ಯಾಂಕ್‌ಗಳಲ್ಲಿ ಫಲಾನುಭವಿಯ ಹೆಸರಿನಲ್ಲಿ ಪ್ರತ್ಯೇಕವಾಗಿ 2 ವರ್ಷಗಳ ಅವಧಿಗೆ ಠೇವಣಿ ಇಡಲು ಕ್ರಮ ವಹಿಸುವುದು.
- ಘಟಕವು 2 ವರ್ಷದ ಅವಧಿಯೊಳಗೆ ಕಾರ್ಯಾರಂಭಗೊಂಡು ಚಾಲ್ತಿ ಇದ್ದಲ್ಲಿ, ಸದರಿ ಸಹಾಯಧನ ಮೊತ್ತವನ್ನು ಫಲಾನುಭವಿಯ ಸಾಲದ ಖಾತೆಗೆ ಹೊಂದಾಣಿಕೆ (Back end Subsidy) ಮಾಡಲಾಗುವುದು.
- ಘಟಕವು 2 ವರ್ಷದ ಅವಧಿಯೊಳಗೆ ಕಾರ್ಯಾರಂಭಗೊಂಡು ಚಾಲ್ತಿ ಇಲ್ಲದೇ ಇದ್ದಲ್ಲಿ ಈಗಾಗಲೇ ಹಣಕಾಸು ಸಂಸ್ಥೆ/ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಸಹಾಯಧನವನ್ನು ಸಂಬಂಧಪಟ್ಟ ಹಣಕಾಸು ಸಂಸ್ಥೆ/ಬ್ಯಾಂಕ್‌ನಿಂದ ಸರ್ಕಾರಕ್ಕೆ ಮರುಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

## 5. ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆ ಕಾರ್ಯಕ್ರಮಕ್ಕೆ ಪಾಲಿಸಬೇಕಾದ ಮಾರ್ಗಸೂಚಿಗಳು

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳು ಸ್ಥಾಪಿಸುವ ಕೈಗಾರಿಕಾ ಸಂಘ / ಸಂಸ್ಥೆ / ಟ್ರಸ್ಟ್ ಅಥವಾ ಶೇಕಡ 51 ಕ್ಕಿಂತ ಹೆಚ್ಚು ಇರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರನ್ನು ಒಳಗೊಂಡ ಇತರೆ ಸಂಘ/ ಸಂಸ್ಥೆಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳನ್ನು / ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ ಸಂಬಂಧಪಟ್ಟಂತೆ ಕಟ್ಟಡ ನಿರ್ಮಾಣ ಮತ್ತು ಯಂತ್ರೋಪಕರಣ / ಉಪಕರಣಗಳ ಖರೀದಿಗೆ ಅನುದಾನವನ್ನು ನೀಡಲಾಗುವುದು.

**ಸಂಘ ಸಂಸ್ಥೆಗಳ ಅರ್ಹತೆ/ಆಯ್ಕೆ ಮಾನದಂಡ:**

- ಸಂಘ / ಸಂಸ್ಥೆಗಳು ಕೋ-ಆಪರೇಟಿವ್ ಸೊಸೈಟಿ, ಕಾಯ್ದೆ 1957 / ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆ 1960 ಅಥವಾ ಟ್ರಸ್ಟ್ ಕಾಯಿದೆಯಂತೆ ನೊಂದಣಿಯಾಗಿರತಕ್ಕದ್ದು.
- ಈ ಯೋಜನೆಯಡಿ ಸೌಲಭ್ಯ ಪಡೆಯಲು ಸಂಘ ಸಂಸ್ಥೆ /ಟ್ರಸ್ಟ್ ನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರುಗಳು ಶೇ.50 ಕ್ಕಿಂತ ಹೆಚ್ಚು ಇರತಕ್ಕದ್ದು.
- ಸದರಿ ಸಂಘ ಸಂಸ್ಥೆಯು ಕೈಗಾರಿಕಾ ಚಟುವಟಿಕೆ/ಕೌಶಲ್ಯಾಭಿವೃದ್ಧಿ ತರಬೇತಿಯಲ್ಲಿ ಸಂಪೂರ್ಣವಾಗಿ ತೊಡಗಿರತಕ್ಕದ್ದು.
- ಸಂಘ / ಸಂಸ್ಥೆಯಿಂದ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ / ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಲು ಸ್ವಂತ ಭೂಮಿ / ನಿವೇಶನವನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.
- ಸಂಘ / ಸಂಸ್ಥೆಗಳು ತನ್ನ ಬೈ-ಲಾದಲ್ಲಿ ಕೈಗಾರಿಕೆಗೆ ಸಂಬಂಧಿಸಿದಂತೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಬಗ್ಗೆ ಉದ್ದೇಶಗಳನ್ನು ಹೊಂದಿರಬೇಕು.
- ಸಂಘ / ಸಂಸ್ಥೆಗಳು ಸ್ಥಾಪನೆಯಾಗಿ ಕನಿಷ್ಠ 2 ವರ್ಷ ಆಗಿರಬೇಕು. ತರಬೇತಿ ಹಾಗೂ ಇತರೆ ಚಟುವಟಿಕೆಗಳಲ್ಲಿ ಕಡ್ಡಾಯವಾಗಿ ತೊಡಗಿಕೊಂಡಿರಬೇಕು.
- ಈ ಕಾರ್ಯಕ್ರಮದಡಿ ಅರ್ಹ ಸಂಘ-ಸಂಸ್ಥೆಗಳನ್ನು ಆಯ್ಕೆ ಮಾಡಲು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯನ್ನು ರಚಿಸತಕ್ಕದ್ದು. ಆಯ್ಕೆ ಸಮಿತಿ ಸಭೆಯ ನಡವಳಿಯನ್ನು ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

**ಸಂಘ ಸಂಸ್ಥೆಗಳು ನೀಡಬೇಕಾದ ದಾಖಲಾತಿಗಳು:**

- ಭೂಮಿ/ನಿವೇಶನದ ದಾಖಲಾತಿ
- ಸಂಘ/ಸಂಸ್ಥೆಗಳು ಸಂಬಂಧಪಟ್ಟ ಕಾಯಿದೆಯಡಿ ನೋಂದಣಿ ಮಾಡಿಕೊಂಡಿರುವ ಬಗ್ಗೆ ದಾಖಲಾತಿ ಇತ್ಯಾದಿ
- ಸಂಘದ ಬೈ-ಲಾ ಪ್ರತಿ
- ಈಗಾಗಲೇ ತರಬೇತಿ ನೀಡಿರುವ ಬಗ್ಗೆ ವರದಿ
- ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಂದ ವಿದ್ಯುಚ್ಛಕ್ತಿ ಸರಬರಾಜು ಮಂಜೂರಾತಿ ಪತ್ರದ ಪ್ರತಿ ಕಟ್ಟಡದ ನಿರ್ಮಾಣ ಮಾಡಲು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಅನುಮೋದನೆ ದಾಖಲಾತಿ / ನಕ್ಷೆ ಇತ್ಯಾದಿ

**ಯೋಜನೆಯಡಿ ಅನುದಾನದ ಮಿತಿ:**
ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ ಯೋಜನಾ ವೆಚ್ಚದ ಮೇಲೆ ಶೇ. 60 ರಷ್ಟು ಅಥವಾ ಗರಿಷ್ಠ ರೂ.20.00 ಲಕ್ಷಗಳವರೆವಿಗೂ ಈ ಕೆಳಕಂಡಂತೆ ಅನುದಾನ ಪಡೆಯಲು ಅರ್ಹವಿರುತ್ತದೆ.

**ಕಟ್ಟಡ ನಿರ್ಮಾಣ:** ಕಟ್ಟಡದ ವೆಚ್ಚದ ಶೇಕಡ 60 ರಷ್ಟು ಅಥವಾ ಗರಿಷ್ಠ ರೂ.12.00 ಲಕ್ಷಗಳವರೆಗೂ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು. ಉಳಿದ ಕಟ್ಟಡದ ವೆಚ್ಚವನ್ನು ಸಂಸ್ಥೆಯೇ ಸಂಪೂರ್ಣವಾಗಿ ಭರಿಸುವುದು.

**ಯಂತ್ರೋಪಕರಣ / ಉಪಕರಣಗಳ ಖರೀದಿಗೆ:** ಯಂತ್ರೋಪಕರಣ / ಉಪಕರಣಗಳ ವೆಚ್ಚದ ಶೇ. 60 ರಷ್ಟು ಅಥವಾ ಗರಿಷ್ಠ ರೂ.8.00 ಲಕ್ಷಗಳವರೆಗೂ ಯಂತ್ರೋಪಕರಣ/ಉಪಕರಣಗಳ ಖರೀದಿಗೆ ಅನುದಾನ ನೀಡಲಾಗುವುದು. ಉಳಿದ ಯಂತ್ರೋಪಕರಣಗಳ ವೆಚ್ಚವನ್ನು ಸಂಸ್ಥೆಯೇ ಭರಿಸುವುದು.

**ಸಂಸ್ಥೆಯು ಪಾಲಿಸಬೇಕಾದ ಇತರ ನಿಬಂಧನೆಗಳು**

- ಸಂಘ/ಸಂಸ್ಥೆಯ ತರಬೇತಿ ಕೇಂದ್ರ ಕಟ್ಟಡ ಹಾಗೂ ಯಂತ್ರೋಪಕರಣ/ ಉಪಕರಣಗಳಿಗೆ ಸ್ವಂತ ಮೂಲಗಳಿಂದ ಶೇ.40 ರಷ್ಟು ಬಂಡವಾಳ ಭರಿಸಿದಲ್ಲಿ ಸದರಿ ಆಸ್ತಿಯ ಮೇಲೆ ಮೊದಲನೇ ಚಾರ್ಜನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಗೆ ನೀಡಬೇಕು.

- ಸಂಘ/ಸಂಸ್ಥೆಯು ಹಣಕಾಸು ಸಂಸ್ಥೆ / ಬ್ಯಾಂಕುಗಳಿಂದ ಸಾಲ ಪಡೆದಿದ್ದಲ್ಲಿ ಈ ಆಸ್ತಿಯ ಮೇಲೆ ಎರಡನೇ ಚಾರ್ಜನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ನೀಡತಕ್ಕದ್ದು.
- ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ ಸಾಮಾನ್ಯ ಸೌಲಭ್ಯ ಕೇಂದ್ರ ಸ್ಥಾಪನೆಯಾದ ನಂತರ ಕನಿಷ್ಠ 10 ವರ್ಷಗಳ ಸತತವಾಗಿ ಗುಣ ಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕದ್ದು ಹಾಗೂ ಈ ಸಂಬಂಧ MOU ಮಾಡತಕ್ಕದ್ದು.
- ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ/ಉದ್ಯೋಗಾವಕಾಶ ಕಡ್ಡಾಯವಾಗಿ ಕಲ್ಪಿಸತಕ್ಕದ್ದು.
- ಉಪಕರಣಗಳ ಖರೀದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿ ರೂಪಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

## 6. ಸಣ್ಣ /ಅತಿ ಸಣ್ಣ ಕೈಗಾರಿಕೆಗಳಿಗೆ "ಡಿ" ಮಾದರಿಯ ಮಳಿಗೆಯ ವೆಚ್ಚದ ಮೇಲೆ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುವ ಕಾರ್ಯಕ್ರಮ

ಸಣ್ಣ ಅತೀ ಸಣ್ಣ ಕೈಗಾರಿಕೆ ಸ್ಥಾಪಿಸಲು ಶೇ.90ರಷ್ಟು ರಿಯಾಯಿತಿ ದರದಲ್ಲಿ "ಡಿ" ಮಾದರಿಯ ಮಳಿಗೆಗಳನ್ನು ಕೆಎಸ್ಎಸ್ಐಡಿಸಿ ವತಿಯಿಂದ ಕೈಗಾರಿಕಾ ವಸಾಹಾತುವಿನಲ್ಲಿ ನಿರ್ಮಾಣ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ಯಮಶೀಲರಿಗೆ ಕೈಗಾರಿಕಾ ಸ್ಥಾಪನೆಗಾಗಿ ಹಂಚಿಕೆ ಮಾಡಲಾಗುವುದು.

**ಯೋಜನೆಯ ರೂಪುರೇಷೆ :**

- ಈ ಯೋಜನೆಯಡಿ ಕೆಎಸ್ಎಸ್ಐಡಿಸಿ ರವರ ವಸಾಹಾತುವಿನಲ್ಲಿ ಪ್ರತ್ಯೇಕವಾಗಿ ಕನಿಷ್ಠ 1500 ಚದರಡಿ ನಿವೇಶನಗಳನ್ನು ನಿರ್ಮಿಸಿ 970 ಚದರಡಿ ವಿಸ್ತೀರ್ಣದ "ಡಿ" ಮಾದರಿಯ ಮಳಿಗೆಗಳನ್ನು ನಿರ್ಮಾಣ ಮಾಡಲು ಅವಕಾಶವಿರುತ್ತದೆ.
- ನಿವೇಶನದ ಬೆಲೆಯನ್ನು ಒಳಗೊಂಡಂತೆ ಮಳಿಗೆಯ ನಿರ್ಮಾಣ ವೆಚ್ಚದ ಶೇ.90ರಷ್ಟು ರಿಯಾಯಿತಿಯನ್ನು ಸರ್ಕಾರದ ವತಿಯಿಂದ ಹಾಗೂ ಉಳಿದ ಶೇ.10ರಷ್ಟು ನಿರ್ಮಾಣ ವೆಚ್ಚವನ್ನು ಕೆಎಸ್ಎಸ್ಐಡಿಸಿ ಸಂಸ್ಥೆಯು ಭರಿಸಿ ಮಳಿಗೆ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.
- ಕೆಎಸ್ಎಸ್ಐಡಿಸಿ ರವರು ಸದರಿ ಮಳಿಗೆಗಳ ಸ್ವಾಧೀನವನ್ನು ಹಂಚಿಕೆದಾರರು (ಫಲಾನುಭವಿಗಳಿಗೆ) ನೀಡಿದ ನಂತರ ಮಳಿಗೆಯಲ್ಲಿ ಅವಶ್ಯಕತೆ ಇರುವ ಇತರೆ ಸೌಕರ್ಯಗಳನ್ನು ಫಲಾನುಭವಿಗಳು ಖುದ್ದಾಗಿ ಭರಿಸತಕ್ಕದ್ದು.

**ಮಳಿಗೆಗಳ ಹಂಚಿಕೆ ವಿಧಾನ:**

- ಫಲಾನುಭವಿಯು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರತಕ್ಕದ್ದು.
- ಫಲಾನುಭವಿಯು ಕೈಗಾರಿಕಾ ಅಥವಾ ಸೇವಾ ಚಟುವಟಿಕೆಯಡಿ ಕೈಗಾರಿಕೆಯನ್ನು ಸ್ಥಾಪಿಸುವುದು.
- ಕೆಎಸ್ಎಸ್ಐಡಿಸಿ ಸಂಸ್ಥೆಯು ಇಲಾಖೆಯಿಂದ ನೀಡುವ ಶೇ.90 ರಷ್ಟು ರಿಯಾಯಿತಿ ಜೊತೆಗೆ ಉದ್ದಿಮೆದಾರರ ಪಾಲಿನ ವಂತಿಗೆಯನ್ನು (ಶೇ.10 ರಷ್ಟು ಮಾತ್ರ) ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಮಳಿಗೆ ಹಂಚಿಕೆ ಮಾಡಲಾಗುವುದು.
- ಮಳಿಗೆ ಹಂಚಿಕೆಯಾದ 2 ವರ್ಷದೊಳಗೆ ಕೈಗಾರಿಕೆಯನ್ನು ಪ್ರಾರಂಭಿಸಲು ಸೂಕ್ತ ಕ್ರಮ ತೆಗೆದುಕೊಳ್ಳದೇ ಇದ್ದಲ್ಲಿ, ಹಂಚಿಕೆಯನ್ನು ರದ್ದುಗೊಳಿಸಿ ಇತರೇ ಅರ್ಹ ಪರಿಶಿಷ್ಟ ಪಂಗಡಗಳ ಫಲಾನುಭವಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳುವುದು.
- ಈಗಾಗಲೇ ಮಳಿಗೆಯ ವೆಚ್ಚವನ್ನು ನಿರ್ಧರಿಸಿದ್ದು, ಫಲಾನುಭವಿಯು ಶೇಕಡ 10 ರಷ್ಟನ್ನು ಮಾತ್ರ ಕೆಎಸ್ಎಸ್ಐಡಿಸಿಗೆ ಪಾವತಿಸಿ, ಮಳಿಗೆಯ ಸ್ವಾಧೀನವನ್ನು ಪಡೆಯುವುದು.
- ಮಳಿಗೆಯನ್ನು 15 ವರ್ಷಗಳ ಅವಧಿಗೆ ಲೀಸ್-ಕಂ-ಸೇಲ್ ಡೀಡ್ ಮಾಡಿ ಹಸ್ತಾಂತರಿಸುವುದು. ಅವಧಿ ಮುಗಿದ ನಂತರ ಕೈಗಾರಿಕೆ ಚಾಲ್ತಿಯಲ್ಲಿದ್ದಲ್ಲಿ ಶುದ್ಧ ಕ್ರಯ ಪತ್ರವನ್ನು ನೀಡಲು ಕೆಎಸ್ಐಐಡಿಸಿ ಕ್ರಮ ವಹಿಸುವುದು.

## 7. ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ

ಈ ಯೋಜನೆಯಡಿ ಪ.ಜಾ/ಪ.ಪಂ. ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಹೊಸ ಘಟಕ ಸ್ಥಾಪಿಸುವ ಮೊದಲ ಪೀಳಿಗೆ ಉದ್ದಿಮೆದಾರಿಗೆ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿ ರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು. ವಿಸ್ತರಣೆ/ಆಧುನೀಕರಣ/ಚಟುವಟಿಕೆ ಬದಲಾವಣೆ ಹೊಂದಿದ ಉದ್ಯಮಗಳು ಅರ್ಹವಿರುವುದಿಲ್ಲ.

**ಅರ್ಹ ಸಹಾಯಧನ ಮೊತ್ತ:**

ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ಹೂಡಿದ ಬಂಡವಾಳವು ರೂ.2.00 ಕೋಟಿಗೊಳಪಡುವ ಘಟಕಕ್ಕೆ – ಡೆಟ್ ಈಕ್ವಿಟಿ 2:1 ರಂತೆ, ಪ್ರವರ್ತಕರ ಬಂಡವಾಳ ಗರಿಷ್ಠ ರೂ.33.33ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು.

**ಮಂಜೂರಾತಿ ಸಮಿತಿ:**

ಪರಿಶೀಲನಾ ಸಭೆಯಲ್ಲಿ ಶಿಫಾರಸ್ಸಾದ ಘಟಕಗಳಿಗೆ ವಿವರವಾಗಿ ಪರಿಶೀಲಿಸಿದ ನಂತರ ಮಂಜೂರಾತಿ ಸಮಿತಿ ಸಭೆಯಲ್ಲಿ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಮಂಜೂರಾತಿ ಮಾಡಲಾಗುವುದು.

**ಅರ್ಹತೆ:**

- ಪ.ಜಾ/ಪ.ಪಂ. ಉದ್ದಿಮೆದಾರರು ಮಾಲೀಕತ್ವ/ ಪಾಲುದಾರಿಕೆ/ ಟ್ರಸ್ಟ್/ ಸಂಘ/ ಕಂಪನಿಗಳಲ್ಲಿ ಸ್ಥಾಪಿಸುವ ಘಟಕಗಳಲ್ಲಿ ಎಲ್ಲಾ ಪಾಲುದಾರರು/ ಸದಸ್ಯರು/ ನಿರ್ದೇಶಕರು ಪ.ಜಾ/ಪ.ಪಂ. ವರ್ಗಕ್ಕೆ ಸೇರಿರತಕ್ಕದ್ದು.
- ಹೊಸ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳು ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಪಡೆಯಬಹುದಾಗಿದೆ.
- ಹೊಸ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅತಿ ಸಣ್ಣ ಮತ್ತು ಸಣ್ಣ ಸೇವಾ ಘಟಕಗಳು ಸ್ಥಿರಾಸ್ತಿ ಮೇಲೆ ಬಂಡವಾಳ ಹೂಡಿದಲ್ಲಿ ಸಹಾಯ ಪಡೆಯಲು ಅರ್ಹರಾಗುತ್ತಾರೆ.

ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದ ಮೂಲಕ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸುವುದು:

- ನಿಗದಿತ ನಮೂನೆಯಲ್ಲಿ ಅರ್ಜಿ
- ಉದ್ಯೋಗ ಆಧಾರ್ ಮೆಮೋರಾಂಡಮ್
- ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿದ ಜಾತಿ ಪ್ರಮಾಣ ಪತ್ರದ ಪ್ರತಿ
- ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿ ಪತ್ರ ಮತ್ತು ಅಪ್ರೈಸಲ್ ವರದಿಯ ಪ್ರತಿಗಳು
- ಮೊದಲನೇ ಕಂತಿನ ಸಾಲ ಬಿಡುಗಡೆ ಬಗ್ಗೆ ದಾಖಲಾತಿ

**ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯ ಮರುಪಾವತಿ ವಿಧಾನ:**

- ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯ ಮೊತ್ತವು ಬಡ್ಡಿರಹಿತ ಸಾಲವಾಗಿರುತ್ತದೆ.
- ಮರುಪಾವತಿಗೆ ಬಾಕಿ ಇರುವ ಮೊತ್ತದ ಮೇಲೆ ಶೇ.1 ರಷ್ಟು ಸೇವಾ ಶುಲ್ಕವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆಯವರು ಸಂಬಂಧಪಟ್ಟ ಘಟಕಗಳಿಗೆ ವಿಧಿಸುವುದು.
- ಸಾಲ ಬಿಡುಗಡೆ ಮಾಡಿದ ದಿನಾಂಕದಿಂದ 04 ವರ್ಷಗಳವರೆಗೂ Moratorium ಅವಧಿಯಾಗಿರುತ್ತದೆ. ನಂತರ 5 ವರ್ಷಗಳಲ್ಲಿ 20 ತ್ರೈಮಾಸಿಕ ಸಮ ಕಂತುಗಳಲ್ಲಿ ಈ ಸಾಲವನ್ನು ಮರು ಪಾವತಿ ಮಾಡಬೇಕಾಗಿರುತ್ತದೆ.
- ಆದರೆ, ಅರ್ಹ ಆರ್ಥಿಕ ಸಂಸ್ಥೆಗಳಿಂದ ಸಾಲ ಮಂಜೂರಾಗಿ, ದಿನಾಂಕ:28/09/2018ರಂದು ಮತ್ತು ನಂತರದ ದಿನಾಂಕದಲ್ಲಿ ಮೊದಲನೇ ಕಂತಿನ ಸಾಲ ಬಿಡುಗಡೆಯಾದ ಪ್ರಸ್ತಾವನೆಗಳಿಗೆ ಸಾಲ ಬಿಡುಗಡೆ ಮಾಡಿದ ದಿನಾಂಕದಿಂದ 01 ವರ್ಷಗಳವರೆಗೂ Moratorium ಅವಧಿಯಾಗಿರುತ್ತದೆ. ನಂತರ 5 ವರ್ಷಗಳಲ್ಲಿ 20 ತ್ರೈಮಾಸಿಕ ಸಮ ಕಂತುಗಳಲ್ಲಿ ಈ ಸಾಲವನ್ನು ಮರು ಪಾವತಿ ಮಾಡಬೇಕಾಗಿರುತ್ತದೆ.

## 8 ಇಲಾಖೆಯ ಸಂಸ್ಥೆಗಳಿಗೆ ಕೈಗಾರಿಕಾ ಮೂಲಭೂತ ಸೌಕರ್ಯಗಳು ಕಾರ್ಯಕ್ರಮ

ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ನಿಗಮ ಮತ್ತು ಮಂಡಳಿಗಳಲ್ಲಿ ಮೂಲಭೂತ ಸೌಕರ್ಯವನ್ನು ಬಲಪಡಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಆಧುನಿಕ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ, ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಮಹಾ ಮಂಡಳಿ ಹಾಗೂ ಶಿಲ್ಪ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯವನ್ನು ಅನುದಾನದ ರೂಪದಲ್ಲಿ ಮಂಜೂರು ಮಾಡಲಾಗುವುದು.

**ಅರ್ಹತೆ/ಆಯ್ಕೆ ಮಾನದಂಡ**

- ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಸ್ವಂತ ಭೂಮಿ ಮತ್ತು ಕಟ್ಟಡ ಇದ್ದಲ್ಲಿ ಹಾಲಿ ಇರುವ ಮೂಲಭೂತ ಸೌಕರ್ಯಗಳ ಜೊತೆಗೆ ತರಬೇತಿಗೆ ಅವಶ್ಯಕತೆ ಇರುವ ಹೆಚ್ಚುವರಿ ಕಟ್ಟಡ ನಿರ್ಮಾಣ ಹಾಗೂ ಆಧುನಿಕ ಯಂತ್ರೋಪಕರಣಗಳು/ ಉಪಕರಣಗಳನ್ನು ಖರೀದಿಸಿ ಅಳವಡಿಸಲು ಅವಕಾಶವಿರುತ್ತದೆ.
- ಸಂಸ್ಥೆಯವರು ಯಂತ್ರೋಪಕರಣ/ಉಪಕರಣಗಳನ್ನು ಖರೀದಿಸಿದ ನಂತರ ತರಬೇತಿ/ಉತ್ಪಾದನಾ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ತರಬೇತಿ/ ಉತ್ಪಾದನಾ ಕೇಂದ್ರಗಳಲ್ಲಿ ಉದ್ಯೋಗ ಕಲ್ಪಿಸಬೇಕಾಗುವುದು.

## 9 ಖಾದಿ ನೇಕಾರರಿಗೆ ಉಚಿತ ಚರಕಗಳ ಸರಬರಾಜು

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ ಗುರುತಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಆರ್ಥಿಕ ಮತ್ತು ಸಾಮಾಜಿಕ ಜೀವನ ಮಟ್ಟವು ಸುಧಾರಿಸುವ ಸಲುವಾಗಿ ಪ.ಜಾ/ಪ.ಪಂ. ದ ಖಾದಿ ನೇಕಾರರಿಗೆ ರೂ.13,500-00 ಮೌಲ್ಯದ ಖಾದಿ ಚರಕಗಳನ್ನು ಉಚಿತವಾಗಿ ನೀಡಲಾಗುವುದು.

## 10 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಅಧ್ಯಯನ ಪ್ರವಾಸ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರು ತಮ್ಮ ಕೈಗಾರಿಕೆ ಚಟುವಟಿಕೆಯನ್ನು ಅಭಿವೃದ್ಧಿಪಡಿಸಲು / ಆಧುನಿಕ / ತಾಂತ್ರಿಕ ನೈಪುಣ್ಯತೆ ಹೊಂದಲು ಹಾಗೂ ಮಾರುಕಟ್ಟೆ ಅಭಿವೃದ್ಧಿಗೆ ಸಹಾಯಕವಾಗಿ ಇತರ ರಾಜ್ಯಗಳು /ಹೊರದೇಶಗಳಿಗೆ ಪ್ರವಾಸ ಕೈಗೊಂಡು ಅಧ್ಯಯನ ಮಾಡಲು ತಗಲುವ ಪ್ರವಾಸ ವೆಚ್ಚದಲ್ಲಿ ಸರ್ಕಾರದ ವತಿಯಿಂದ ಶೇ.90ರಷ್ಟು ರಿಯಾಯಿತಿ ಈ ಕೆಳಕಂಡಂತೆ ಮಿತಿಗೊಳಿಸಿ ಮಂಜೂರು ಮಾಡಲಾಗುವುದು.

**ಯೋಜನೆಯ ರೂಪುರೇಷೆ :**

- ಅಧ್ಯಯನ ಪ್ರವಾಸವು ಇತರೆ ರಾಜ್ಯಗಳಲ್ಲಿ ಕೈಗೊಂಡಿದ್ದಲ್ಲಿ, ಒಬ್ಬ ಅಭ್ಯರ್ಥಿಗೆ ಗರಿಷ್ಠ ರಿಯಾಯಿತಿ ರೂ.15,000/-ಗಳು ಅಥವಾ ನಿಖರವಾದ ಖರ್ಚು, ಇವುಗಳಲ್ಲಿ ಯಾವುದು ಕಡಿಮೆಯೋ, ಅದನ್ನು ಪರಿಗಣಿಸಲಾಗುವುದು.
- ಅಧ್ಯಯನ ಪ್ರವಾಸವು ಹೊರದೇಶಗಳಲ್ಲಿ ಕೈಗೊಂಡಿದ್ದಲ್ಲಿ ಒಬ್ಬ ಅಭ್ಯರ್ಥಿಗೆ ಗರಿಷ್ಠ ರಿಯಾಯಿತಿ ಶೇ.90 ರಷ್ಟು ಅಥವಾ ರೂ.1,00,000/-ಗಳು ಇವುಗಳಲ್ಲಿ ಯಾವುದು ಕಡಿಮೆಯೋ, ಅದನ್ನು ಪರಿಗಣಿಸಲಾಗುವುದು.

ಅರ್ಹತೆ:

- ಉದ್ದಿಮೆದಾರರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರತಕ್ಕದ್ದು.
- ಕೈಗಾರಿಕಾ ಉದ್ದಿಮೆದಾರರು ಕನಿಷ್ಠ 03 ವರ್ಷಗಳ ಹಿಂದೆ ಪ್ರಾರಂಭಿಸಿದ್ದು ಹಾಲಿ ಚಾಲ್ತಿಯಲ್ಲಿ ಇರತಕ್ಕದ್ದು.
- ಒಂದು ಅಧ್ಯಯನ ಪ್ರವಾಸ ತಂಡದಲ್ಲಿ ಕನಿಷ್ಠ 10 ಉದ್ದಿಮೆದಾರರು ಇರತಕ್ಕದ್ದು.
- ಪ್ರವಾಸದ ಅವಧಿಯು ಕನಿಷ್ಠ 03 ದಿನ ಹಾಗೂ ಗರಿಷ್ಠ 07 ದಿನಗಳ ಅವಧಿ ಇರತಕ್ಕದ್ದು.
- ಒಬ್ಬ ಕೈಗಾರಿಕೋದ್ಯಮಿಯು ಹೊರ ರಾಜ್ಯಕ್ಕೆ ಗರಿಷ್ಠ 02 ಬಾರಿ ಹಾಗೂ ಹೊರ ದೇಶಕ್ಕೆ 01 ಬಾರಿ ಅಧ್ಯಯನ ಪ್ರವಾಸ / ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

**ಅಧ್ಯಯನ ಪ್ರವಾಸಕ್ಕೆ ನೀಡುವ ಸಹಾಯಧನ ಬಿಡುಗಡೆ ವಿಧಾನ :**

- ಸರ್ಕಾರದಿಂದ ಮಂಜೂರಾತಿ ಪಡೆಯಲಾಗುವುದು.
- ಮಂಜೂರಾತಿ ನೀಡಿದ ನಂತರ ಅಧ್ಯಯನ ಪ್ರವಾಸ ಕೈಗೊಂಡ ನಂತರ ಪ್ರವಾಸದ ವೆಚ್ಚದ ವಿವರಗಳನ್ನು ಬಿಲ್ಲು ವೋಚರ್ ಇತ್ಯಾದಿಗಳನ್ನು ಪರಿಶೀಲಿಸಿ, ಅರ್ಹ ಅನುದಾನ ಬಿಡುಗಡೆ ಮಾಡಲಾಗುವುದು.

## 11 ಹಣಕಾಸು ಸಂಸ್ಥೆ ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಇತರೆ ಶುಲ್ಕಗಳ ಮರುಪಾವತಿ

ದಿನಾಂಕ:01-04-2017 ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳೂ ಸಾಲ ಪಡೆಯುವ ಸಂದರ್ಭದಲ್ಲಿ ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಭರಿಸಲಾಗುವ್ವದು.

ಅರ್ಹತೆ

- ದಿನಾಂಕ:01-04-2017ರ ನಂತರ ಉತ್ಪಾದನೆ ಪ್ರಾರಂಬಿಸುವ ಹೊಸ ಘಟಕ ಕೈಗಾರಿಕ ಘಟಕಗಳು.
- ಅತೀ ಸಣ್ಣ ಕೈಗಾರಿಕೆ : ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ಮಿತಿ ರೂ.25.00 ಲಕ್ಷ.
- ಸಣ್ಣ ಕೈಗಾರಿಕೆ : ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ಮಿತಿ ರೂ.500.00 ಲಕ್ಷ.
- ಮೊದಲನೇ ಕಂತಿನ ಸಾಲ ಬಿಡುಗಡೆಯಾದ ದಿನಾಂಕದಿಂದ 12 ತಿಂಗಳೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು.

**ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳ ಮರುಪಾವತಿಗೆ ಸಲ್ಲಿಸಬೇಕಾದ ದಾಖಲಾತಿಗಳು:**

- ಅರ್ಜಿ ನಮೂನೆ - 1 (ಅನುಬಂಧ-ಪಿಎಫ್1)
- ದೃಢೀಕೃತ ಜಾತಿ ಪ್ರಮಾಣ ಪತ್ರ
- ಆಧಾರ ಮತ್ತು ಪ್ಯಾನ್ ಕಾರ್ಡ್ ಪ್ರತಿ
- ನೋಂದಾಯಿತ ಪಾಲುದಾರಿಕೆ ಪಪತ್ರ / ಸಂಘ ಸಂಸ್ಥೆಗೆ ನೋಂದಣಿ/ಮೆಮೊರಂಡಮ್ ಆಫ್ ಆರ್ಟಿಕಲ್ಸ್
- ಸಾಲ ಮಂಜೂರಾತಿಗೆ ಹಣಕಾಸು ಸಂಸ್ಥೆಗೆ ಸಲ್ಲಿಸಿದ ಅರ್ಜಿಯ ಪ್ರತಿ
- ಹಣಕಾಸು ಸಂಸ್ಥೆಯಿಂದ ಸಾಲ ಮಂಜೂರಾತಿ ಪತ್ರ ಮತ್ತು ಅಪ್ರೈಸಲ್ ವರದಿ
- ಸಾಲದ ಮೊದಲನೇ ಕಂತಿನ ಬಿಡುಗಡೆ ಪತ್ರ
- ಅಭ್ಯರ್ಥಿಯ ಬ್ಯಾಂಕ್ ಖಾತೆ ವಿವರ (ಅನುಬಂಧ-ಪಿಎಫ್2)
- ನಿಗದಿತ ನಮೂನೆಯಲ್ಲಿ ರೂ.20 ಛಾಪಾ ಕಾಗದದಲ್ಲಿ ಮರುಪಾವತಿಯಾದ ಅನುದಾನವನ್ನು ಹಿಂಪಡೆಯುವ ಬಗ್ಗೆ ಒಪ್ಪಿಗೆ ಪತ್ರ (ಅನುಬಂಧ-ಪಿಎಫ್3)

- ಬ್ಯಾಂಕಿನವರು ವಿಧಿಸಿರುವ ವಿವಿಧ ಶುಲ್ಕಗಳ ದೃಢೀಕರಣ (ಅನುಬಂಧ-ಪಿಎಫ್4)
- ಇತರೆ ಅವಶ್ಯ ದಾಖಲಾತಿಗಳು

## 12. ವಿದ್ಯುತ್‌ಚ್ಛಕ್ತಿ ಸಹಾಯಧನ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಗಳು ದಿನಾಂಕ:01–04–2017 ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಗಗಳ ಅವಧಿಗೆ ಪ್ರತಿ ಯುನಿಟ್‌ಗೆ 2 ರೂ.ಗಳಷ್ಟು ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗುವುದು.

**ಅರ್ಹತೆ**

- ದಿನಾಂಕ:01–04–2017 ರನಂತರ ಉತ್ಪಾದನೆ ಪ್ರಾರಂಬಿಸುವ ಹೊಸ ಕೈಗಾರಿಕ ಘಟಕಗಳು.
- ಅತೀ ಸಣ್ಣ ಕೈಗಾರಿಕೆ : ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ಮಿತಿ ರೂ.25.00 ಲಕ್ಷ.
- ಸಣ್ಣ ಕೈಗಾರಿಕೆ :ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ಮಿತಿ ರೂ.500.00 ಲಕ್ಷ.
- ಘಟಕ ಪ್ರಾರಂಭಗೊಂಡ ಅಂದರೆ ಮೊದಲ ಮಾರಾಟದ ಬಿಲ್‌ನ ದಿನಾಂಕದಿಂದ ಕನಿಷ್ಠ 6 ತಿಂಗಳೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು.

**ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ವಿದ್ಯುಚ್ಛಕ್ತಿ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲಾತಿಗಳು :**

- ಅರ್ಜಿ ನಮೂನೆ – 1
- ಭೂಮಿ ಮತ್ತು ಕಟ್ಟಡದ ದಾಖಲಾತಿ.
- ನೋಂದಾಯಿತ ಪಾಲುದಾರಿಕೆ ಪಪತ್ರ / ಸಂಘ ಸಂಸ್ಥೆಗೆ ನೋಂದಣಿ/ಮೆಮೊರಂಡಮ್ ಆಫ್ ಆರ್ಟಿಕಲ್ಸ್
- ದೃಢೀಕೃತ ಜಾತಿ ಪ್ರಮಾಣ ಪತ್ರ
- ಉದ್ಯೋಗ ಆಧಾರ ಪ್ರಮಾಣ ಪತ್ರ (ಯೂ.ಎ.ಎಂ) ಮತ್ತು ಪ್ಯಾನ್ ಕಾರ್ಡ್ ಪ್ರಮಾಣಪತ್ರ
- ವಿದ್ಯುಚ್ಛಕ್ತಿ ಮಂಜೂರಾತಿ ಪತ್ರ (ಘಟಕದ ಮಾಲೀಕರು / ಘಟಕದ ಹೆಸರಿನಲ್ಲಿ ಮಂಜೂರಾತಿ).
- ವಿದ್ಯುತ್‌ಚ್ಛಕ್ತಿ ಸರ್ವೀಸ್ ಪತ್ರ (ಘಟಕದ ಮಾಲೀಕರು / ಘಟಕದ ಹೆಸರಿನಲ್ಲಿ ಮಂಜೂರಾತಿ).
- ಮೊದಲನೇ ಮಾರಾಟದ ಬಿಲ್.
- ಸ್ಥಳೀಯರಿಗೆ ಉದ್ಯೋಗ ನೀಡಿದ ವಿವರ ಅನುಬಂಧ–2 ರಲ್ಲಿ
- ಬ್ಯಾಂಕ್ ಖಾತೆಯ ವಿವರ ಅನುಬಂಧ–3 ರಲ್ಲಿ
- ವಿದ್ಯುತ್‌ಚ್ಛಕ್ತಿ ಬಿಲ್ ಮತ್ತು ಪಾವತಿ ರಶೀದಿಗಳು
- ಉತ್ಪಾದನಾ ವಿವರ (ಪರಿಮಾಣ ಮತ್ತು ಮೊಬಲಗು)

## ಹೊಸ ಕೈಗಾರಿಕೆ ಸ್ಥಾಪಿಸುವ ಪ್ರಥಮ ಪೀಳಿಗೆಯ ಮಹಿಳೆಯರಿಗೆ ಶೇ 4% ಬಡ್ಡಿದರದಲ್ಲಿ ಸಾಲ

**ಬಡ್ಡಿ ಸಹಾದುಧನ ಯೋಜನೆ**

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ರಾಜ್ಯದಲ್ಲಿ ಸಣ್ಣ / ಮಧ್ಯಮ ತಯಾರಿಕಾ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಮಹಿಳಾ ಉದ್ದಿಮೆದಾರರಿಗೆ ಶೇಕಡ 13% ರಿಂದ 14% ರಂತೆ ಬಡ್ಡಿಯನ್ನು ವಿಧಿಸುತ್ತಿರುವುದಾಗಿ ತಿಳಿಸುತ್ತಾ ಈ ಉದ್ದಿಮೆದಾರರಿಗೆ ಹೆಚ್ಚಿನ ಆಧ್ಯತೆ ಹಾಗೂ ಉತ್ತೇಜನ ನೀಡುವ ಸಲುವಾಗಿ ಬಡ್ಡಿಯಲ್ಲಿ ರಿಯಾಯಿತಿಯನ್ನು ನೀಡಲು ಸರ್ಕಾರದ ಯೋಜನೆಯಲ್ಲಿ ಉದ್ದೇಶಿಸಲಾಗಿದೆ.

ಈ ಯೋಜನೆಯಡಿಲ್ಲಿ ಕನಿಷ್ಠ ರೂ.5.00 ಲಕ್ಷದಿಂದ ಗರಿಷ್ಠ ರೂ.2.00 ಕೋಟಿಗಳವರೆಗೆ ಸಾಲವನ್ನು ಕಲ್ಪಿಸಲಾಗುತ್ತದೆ. ಬಡ್ಡಿ ಸಹಾಯಧನ ಯೋಜನೆಯ ರೂಪುರೇಷೆಗಳು ಈ ಕೆಳಕಂಡಂತಿವೆ.

1. **ಉದ್ದೇಶ :** ಎಂ.ಎಸ್.ಎಂ.ಇ.ಡಿ. ಕಾಯ್ದೆ 2006ರಲ್ಲಿ ಸೂಚಿಸಿದಂತೆ ಅತಿ ಸಣ್ಣ, ಸಣ್ಣ / ಮಧ್ಯಮ ಗಾತ್ರದ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಮಹಿಳಾ ಉದ್ದಿಮೆದಾರರಿಗೆ ಉತ್ತೇಜನ ನೀಡುವ ಸಲುವಾಗಿ ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳನ್ನು ಅಭಿವೃದ್ಧಿ ಪಡಿಸುವುದು. ಆದರೆ ಈಗಾಗಲೇ ಬ್ಯಾಂಕು/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರುವ ಘಟಕಗಳು ತಮ್ಮ ಸಾಲವನ್ನು ಈ ಯೋಜನೆಯಡಿ ವರ್ಗಾಯಿಸಲು ಬರುವುದಿಲ್ಲ.

2. **ನೋಡಲ್ ಏಜೆನ್ಸಿ :** ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಈ ಯೋಜನೆಯನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿದೆ.

3. **ಅರ್ಹತೆ :** ಈ ಕೆಳಗಿನಂತೆ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
   I) ಮಹಿಳಾ ಉದ್ದಿಮೆದಾರರು ಮೊದಲನೇ ಬಾರಿ ಹೊಸ ಘಟಕವನ್ನು ಪ್ರಾರಂಭಿಸುವ ಸಲುವಾಗಿ;

II) ಹಾಲಿ ಕಾರ್ಯನಿರ್ವಹಿಸುತ್ತಿರುವ ಅತಿ ಸಣ್ಣ / ಸಣ್ಣ / ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಉದ್ದಿಮೆದಾರರು ತಮ್ಮ ಘಟಕವನ್ನು ಅಭಿವೃದ್ಧಿಪಡಿಸುವ ಸಲುವಾಗಿ / ಆಧುನೀಕರಣಗೊಳಿಸುವ ಸಲುವಾಗಿ,

III) 1) ಈ ಘಟಕದ ಮಾಲೀಕರು ಮಹಿಳಾ ಅಭ್ಯರ್ಥಿಯಾಗಿರಬೇಕು.

2) ಪಾಲುದಾರಿಕೆಯ ಉದ್ಯಮ / ನಿಯಮಿತ ಕಂಪನಿಗಳಲ್ಲಿ ಮಹಿಳೆಯರ ಹೆಚ್ಚಿನ ಷೇರು / ನಿರ್ದೇಶಕರು ಶೇಕಡ 50 ರಷ್ಟು ಇರಬೇಕು.

4. **ಸಾಲದ ಗಾತ್ರ :** ಈ ಯೋಜನೆಯಡಿಯಲ್ಲಿ ಸಂಸ್ಥೆಯ "ಸಾಲ ನೀತಿ" ಯ ಅನುಸಾರ ಅರ್ಹ ಫಲಾನುಭವಿಗಳಿಗೆ ಕನಿಷ್ಠ ರೂ.5.00 ಲಕ್ಷಗಳಿಂದ ಗರಿಷ್ಠ ರೂ.2.00 ಕೋಟಿಗಳವರೆಗೆ ಸಾಲ ಸೌಲಭ್ಯವನ್ನು ಕೆ.ಎಸ್.ಎಫ್.ಸಿ. ಮೂಲಕ ಕಲ್ಪಿಸಲಾಗುತ್ತದೆ. ವಿವಿಧ ಚಟುವಟಿಕೆಗಳಿಗೆ ಕನಿಷ್ಠ ರೂ.5.00 ಲಕ್ಷಗಳ ಸಾಲವನ್ನು ಈಗಾಗಲೇ ತೆಗೆದುಕೊಂಡ ಘಟಕಗಳ ವಿಸ್ತರಣೆ / ಅಧುನೀಕರಣಕ್ಕಾಗಿ ವೈದ್ಯರು ಹಾಗೂ ಪಶು ವೈದ್ಯರು ಇವರಿಗೆ ಕನಿಷ್ಠ 5.00ಲಕ್ಷ ರೂ.ಗಳ ಸಾಲ.

5. **ಬಡ್ಡಿ ಸಹಾಯಧನ :** ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಾಲವನ್ನು ಮಂಜೂರು ಮಾಡುತ್ತದೆ. ಇದಕ್ಕೆ ಅವರ ನೀತಿ ನಿಬಂಧನೆಗಳಂತೆ ಬಡ್ಡಿಯನ್ನು ವಿಧಿಸುತ್ತಾರೆ. ಕ.ರಾ.ಹ. ಸಂಸ್ಥೆಯಿಂದ ಮಂಜೂರಾದ ಸಾಲದ ಮೇಲೆ ಶೇಕಡ 14ರಷ್ಟು ಬಡ್ಡಿ ವಿಧಿಸಲಾಗುತ್ತದೆ. ಅದರಲ್ಲಿ ಶೇಕಡ 10ರಷ್ಟು ಬಡ್ಡಿದರವನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ನೀಡಲಾಗುವುದು. ಫಲಾನುಭವಿಗಳು ವಾರ್ಷಿಕ ಶೇಕಡ 4ರಷ್ಟು ಬಡ್ಡಿದರ ಪಾವತಿಸ ಬೇಕಾಗಿರುತ್ತದೆ. ಪ್ರತಿ ತಿಂಗಳು ಕ.ರಾ.ಹ. ಸಂಸ್ಥೆಗೆ ಚಾಚೂ ತಪ್ಪದೆ ಮರುಪಾವತಿ ಮಾಡುವಂತಹವರು ಮಾತ್ರ ಈ ಬಡ್ಡಿ ಸಹಾಯಧನ ಪಡೆಯಲು ಅರ್ಹರಿರುತ್ತಾರೆ.

6. **ಬಡ್ಡಿ ಸಹಾಯಧನದ ಅವಧಿ :** ಫಲಾನುಭವಿಯು ಸಾಲದ ಮೊದಲ ಕಂತು ಪಡೆದ ದಿನಾಂಕ ದಿಂದ 5 ವರ್ಷಗಳವರೆಗೆ ಬಡ್ಡಿ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ. ಘಟಕದ ವೆಚ್ಚಕ್ಕೆ ಅನುಸಾರವಾಗಿ ಕ.ರಾ.ಹ.ಸಂಸ್ಥೆಯವರು ಮರುಪಾವತಿಯ ಅವಧಿಯನ್ನು ವಿಸ್ತರಿಸುವ ಅಧಿಕಾರ ಹೊಂದಿರುತ್ತಾರೆ. ಬಡ್ಡಿ ಸಹಾಯಧನ ಯೋಜನೆಯ 5 ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಅನುಬಂಧ-3:

## ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಅಭಿವೃದ್ಧಿ ಪಡಿಸಿದ ಕೈಗಾರಿಕಾ ವಸಾಹತುವಿನ ನಿವೇಶನಗಳನ್ನು ಹಂಚಿಕೆ ಮಾಡಲು ಇರುವ ನಿಯಮ ಹಾಗೂ ನಿಬಂಧನೆಗಳು:

1. ಮಳಿಗೆ/ನಿವೇಶನಗಳನ್ನು "ಹೇಗಿದೆಯೋ ಹಾಗೆ" (As is where is basis) 10 ವರ್ಷಗಳ ಗುತ್ತಿಗೆ ಕರಾರು ಆಧಾರದಲ್ಲಿ ಹಂಚಿಕೆ ಮಾಡಲಾಗುತ್ತದೆ.
2. ಹಂಚಿಕೆ ಸಮಯದಲ್ಲಿ ನೀಡಿದ ಮಳಿಗೆ/ನಿವೇಶನ/ಗೋದಾಮುಗಳ ಅಳತೆಯು ವ್ಯತ್ಯಯವಾಗುವ ಸಂಭವವಿದ್ದು, ಹಂಚಿಕೆದಾರರು ಸ್ವಾಧೀನ ಪಡೆಯುವ ಮುನ್ನ ನಿಖರವಾದ ಅಳತೆಯನ್ನು ಖಚಿತ ಪಡಿಸಿಕೊಂಡು ಆ ಪ್ರಕಾರ ಮಳಿಗೆ/ನಿವೇಶನದ ಮೌಲ್ಯವನ್ನು ಹಾಗೂ ನಿಗಧಿತ ವಿದ್ಯುತ್ ಮಾರ್ಗಶುಲ್ಕವನ್ನು ಪಾವತಿಸಬೇಕು.
3. ನಿಗಮದ ಹಂಚಿಕೆ ನಿಯಮಗಳನ್ವಯ ನಿವೇಶನ/ಮಳಿಗೆ/ಗೋದಾಮುಗಳ ಮೌಲ್ಯವು ತಾತ್ಕಾಲಿಕವಾಗಿದ್ದು, ನಿಖರವಾದ ಅಳತೆ, ಸ್ವಾಧೀನ ಪಡೆಯುವ ದಿನಾಂಕ, ಸೂಕ್ತ ಪ್ರಾಧಿಕಾರಗಳ ಆದೇಶ ಇವುಗಳ ಆಧಾರದ ಮೇಲೆ ಅಂತಿಮ ಮೌಲ್ಯವನ್ನು ನಿರ್ಧರಿಸಲಾಗುವುದು.

ಅ) ನಿಗದಿತ ಅರ್ಜಿ ನಮೂನೆಯನ್ನು ದ್ವಿಪ್ರತಿಯಲ್ಲಿ ಕ.ರಾ.ಸ.ಕೈ.ಅ.ನಿ.ನಿ.ದ ಕೇಂದ್ರ ಹಾಗೂ ವಿಭಾಗೀಯ ಕಛೇರಿಗಳಿಂದ ಪಡೆಯಬಹುದು ಹಾಗೂ ಕ.ರಾ.ಸ.ಕೈ.ಅ.ನಿ.ನಿ.ಯ ವೆಬ್‌ಸೈಟ್ **www.kssidc.co.in** ನಿಂದಲೂ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಆ) ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಿಗಧಿತ ಅರ್ಜಿ ನಮೂನೆ ಜೊತೆ ರೂ. 5000 (ತೆರಿಗೆ ಸೇರಿದಂತೆ) ಅರ್ಜಿ ಶುಲ್ಕವಾಗಿ ಮತ್ತು ರೂ. 2,360 ಪರಿಶೀಲನಾ ಶುಲ್ಕ (ತೆರಿಗೆ ಸೇರಿದಂತೆ) ವನ್ನು ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.

ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ರೂ. 2,500 (ತೆರಿಗೆ ಸೇರಿದಂತೆ) ಅರ್ಜಿ ಶುಲ್ಕವಾಗಿ ಮತ್ತು ರೂ. 1,180 ಪರಿಶೀಲನಾ ಶುಲ್ಕ (ತೆರಿಗೆ ಸೇರಿದಂತೆ) ವನ್ನು ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.

ಈ) ಮುಂಗಡ ಠೇವಣಿ ಮೊತ್ತವನ್ನು ಪ್ರಕಟಣೆಯಲ್ಲಿ ತೋರಿಸಿರುವ ಮೊತ್ತಕ್ಕೆ ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.

ಉ)
- ❖ ಮೇಲ್ಕಂಡಂತೆ ಎರಡು ಡಿ.ಡಿ.ಗಳಲ್ಲಿ ಒಂದನ್ನು ಮುಂಗಡ ಠೇವಣಿಗಾಗಿ ಹಾಗೂ ಮತ್ತೊಂದನ್ನು ಅರ್ಜಿ ಶುಲ್ಕ ಮತ್ತು ಪರಿಶೀಲನಾ ಶುಲ್ಕ ಎರಡನ್ನು ಸೇರಿಸಿ ಅರ್ಜಿಯೊಂದಿಗೆ ಯಾವ ಕೈಗಾರಿಕಾ ವಸಾಹತುವಿನ ಮಳಿಗೆ/ ನಿವೇಶನ/ ಗೋದಾಮುಗಳ ಹಂಚಿಕೆ ಕೋರಿ ಸಲ್ಲಿಸಲ್ಪಡುವುದೋ, ಅಲ್ಲಿಗೆ ಹಣ ಸಂದಾಯವಾಗುವಂತೆ **ಕೆ.ಎಸ್.ಎಸ್.ಐ.ಡಿ.ಸಿ ಲಿಮಿಟೆಡ್, ವಿಭಾಗೀಯ ಕಛೇರಿಯ** ಹೆಸರಿಗೆ ಡಿ.ಡಿ. ಯನ್ನು ಸಲ್ಲಿಸುವುದು
- ❖ ಅರ್ಜಿದಾರರು ಭರ್ತಿ ಮಾಡಿದ ಅರ್ಜಿಯನ್ನು ಮಳಿಗೆ/ನಿವೇಶನದ ಮೂಲ ಮೌಲ್ಯದ ಶೇಕಡಾ 10 ರಷ್ಟರ ಮುಂಗಡ ಠೇವಣಿ ಹಣದ ಡಿಮ್ಯಾಂಡ್ ಡ್ರಾಫ್ಟ್‌ನೊಂದಿಗೆ ಸಲ್ಲಿಸುವುದು.. (ಹಂಚಿಕೆಯಾಗದಿದ್ದಲ್ಲಿ ಮುಂಗಡ ಠೇವಣಿ ಮೊತ್ತದ ಮೇಲೆ ಯಾವುದೇ ಬಡ್ಡಿಯನ್ನು ನೀಡದೇ ಮರು ಪಾವತಿಸಲಾಗುವುದು ಮತ್ತು ಹಂಚಿಕೆಯಾದಲ್ಲಿ, ನಿವೇಶನ/ಮಳಿಗೆ ಮೌಲ್ಯಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು)
- ❖ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಅರ್ಜಿಯ ಜೊತೆಗೆ ಮಳಿಗೆ/ನಿವೇಶನದ ಮೌಲ್ಯದ ಶೇಕಡಾ 5 ರಷ್ಟು ಮುಂಗಡ ಠೇವಣಿಯನ್ನು ಸಲ್ಲಿಸುವುದು, (ಹಂಚಿಕೆಯಾಗದಿದ್ದಲ್ಲಿ ಬಡ್ಡಿ ರಹಿತವಾಗಿ ಮರು-ಪಾವತಿಯಾಗುವುದು ಮತ್ತು ಹಂಚಿಕೆಯಾದಲ್ಲಿ, ನಿವೇಶನ/ಮಳಿಗೆ ಮೌಲ್ಯಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು)
- ❖ ಹಂಚಿಕೆಯನ್ನು ಪಡೆದು, ಮೌಲ್ಯವನ್ನು ನಿಗಧಿತ ಸಮಯದಲ್ಲಿ ಪಾವತಿಸಿ, ಸ್ವಾಧೀನ ತೆಗೆದುಕೊಳ್ಳಲು ವಿಫಲರಾದಲ್ಲಿ, ನಿಗಮದ ಮಳಿಗೆ/ನಿವೇಶನಗಳ ಹಂಚಿಕೆ ನಿಯಮಗಳ ಅನ್ವಯ ಮುಂಗಡ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

4. ಮಳಿಗೆ/ನಿವೇಶನ/ಗೋದಾಮುಗಳನ್ನು ಹಂಚಿಕೆ ಪ್ರಕ್ರಿಯೆ ನಡೆಸುವ ಸಂದರ್ಭದಲ್ಲಿ ಪರಾಮರ್ಶಕ ಸಮಿತಿಯು, ಅರ್ಜಿದಾರರು ಸಲ್ಲಿಸಿದ ದಾಖಲೆಗಳ ಆಧಾರದ ಮೇಲೆ ಅಂಕಗಳನ್ನು ನೀಡಿ ಈ ಅಂಕಗಳ ಆಧಾರದ ಮೇಲೆ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಹಂಚಿಕೆಗೆ ಪರಿಗಣಿಸಲಾಗುತ್ತದೆ, ಆದ್ದರಿಂದ ಸಂಬಂಧಿಸಿದ ಈ ಕೆಳಕಂಡ ಪೂರಕ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

- ❖ ಉದ್ದೇಶಿತ ಕೈಗಾರಿಕೆಯ ವಿವರವಾದ ಯೋಜನಾ ವರದಿ. (ಯೋಜನಾ ವರದಿಯಲ್ಲಿ ಸಲ್ಲಿಸಬೇಕಾದ ವಿವರಗಳನ್ನು ನಿಗಮದ ಹಂಚಿಕೆಗಾಗಿ ಸಲ್ಲಿಸುವ ಅರ್ಜಿಯಲ್ಲಿ ವಿವರವಾಗಿ ವಿವರಿಸಲಾಗಿದೆ).
- ❖ ಅರ್ಜಿದಾರರು ಈಗಾಗಲೇ ಕೈಗಾರಿಕೆ ನಡೆಸುತ್ತಿದ್ದಲ್ಲಿ, ಸಂಬಂಧಪಟ್ಟ ದಾಖಲೆಗಳು
- ❖ ಅರ್ಜಿದಾರರು ಸ್ಥಳೀಯರಾಗಿದ್ದಲ್ಲಿ, ಕರ್ನಾಟಕದಲ್ಲಿ 10 ವರ್ಷಕ್ಕಿಂತ ಹೆಚ್ಚು ಅವಧಿ ವಾಸಿಸುತ್ತಿರುವ ಬಗ್ಗೆ ಕಂದಾಯ ಇಲಾಖೆಯಿಂದ ದೃಢೀಕರಣ ಪತ್ರ (Domicile Certificate), ಪಾಲುದಾರಿಕೆ/ಪ್ರೈವೇಟ್ ಲಿಮಿಟೆಡ್ ಕಂಪನಿಯಾದಲ್ಲಿ, ಪಾಲುದಾರರ/ನಿರ್ದೇಶಕರ ವಾಸಿಸುತ್ತಿರುವ ಪ್ರಮಾಣ ಪತ್ರ.

- ಯೋಜನಾ ಬಂಡವಾಳ ಹೂಡಿಕೆಗೆ ಇರುವ ಸಾಮರ್ಥ್ಯವನ್ನು ತೋರಿಸಲು ಬ್ಯಾಂಕಿನಿಂದ/ಹಣಕಾಸು ಸಂಸ್ಥೆಯಿಂದ ಸಾಲ ಮಂಜೂರಾತಿ ಒಪ್ಪಿಗೆ ಪತ್ರ ಅಥವಾ ಠೇವಣಿಗಳನ್ನು ಹೊಂದಿದ್ದಲ್ಲಿ, ಈ ಬಗ್ಗೆ ಬ್ಯಾಂಕಿನ ಪ್ರಮಾಣ ಪತ್ರ, ಹಾಗೂ ಸಾಲವೆನ್ಸಿ ಪ್ರಮಾಣ ಪತ್ರ.
- ಉದ್ಯೋಗ ಕಲ್ಪಿಸುವ ಸಾಮರ್ಥ್ಯದ ವಿವರ.
- ಉದ್ದೇಶಿತ ಉತ್ಪಾದನೆಯು ರಫ್ತು ಮಾಡುವ ವಸ್ತು, ಆಮದು ಮಾಡಿಕೊಳ್ಳುವ ವಸ್ತುವಿಗೆ ಪರ್ಯಾಯ ವಸ್ತುವಾಗಿದ್ದಲ್ಲಿ, ಸ್ಥಳೀಯ ಸಂಪನ್ಮೂಲಗಳನ್ನು ಬಳಸುವ ಕೈಗಾರಿಕೆ/ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪರ್ಯಾಯ/ಹೈಟೆಕ್ ಕೈಗಾರಿಕೆಗಳು ಆಗಿದ್ದಲ್ಲಿ, ಅವುಗಳನ್ನು ಸ್ಪಷ್ಟೀಕರಿಸುವ ದಾಖಲೆಗಳು.
- ಮಾಲಿನ್ಯ ರಹಿತ ವಸ್ತುವಿನ ಉತ್ಪಾದನೆಯಾದಲ್ಲಿ, ಸದರಿ ಉತ್ಪಾದನೆಯನ್ನು ತೋರಿಸುವ ದಾಖಲೆಗಳು.
- ಅರ್ಜಿದಾರರು ಪ್ರಥಮ ತಲೆಮಾರಿನವರಾಗಿದ್ದಲ್ಲಿ ಸಂಬಂಧಿಸಿದ ದಾಖಲೆಗಳು.
- ಪ್ರಸ್ತುತ ಯೋಜನೆಯು ಸಿ.ಜಿ.ಟಿ.ಎಂ.ಎಸ್.ಇ.(**CREDIT GUARANTEE FUND TRUST FOR MICRO AND SMALL ENTERPRISES**) ಇವರಿಗೆ ಸಲ್ಲಿಸಿದ್ದಲ್ಲಿ, ಅದರ ವಿವರಗಳು.
- ಪ್ರಸ್ತುತ ಯೋಜನೆಯು ಸಿ.ಜಿ.ಟಿ.ಎಂ.ಎಸ್.ಇ. ಗ್ಯಾರಂಟಿ ಅಡಿ ಇದ್ದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು.
- ರೂ. 100 ಲಕ್ಷಗಳಿಗಿಂತ ಹೆಚ್ಚಿನ ಯೋಜನಾ ಬಂಡವಾಳ ಹೂಡಿಕೆ ಸಾಮರ್ಥ್ಯ ಹೊಂದಿರುವ ಯೋಜನೆ ಆಗಿದ್ದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ಕೈಗಾರಿಕಾ ನೀತಿ ಅನ್ವಯ ಹಾಗೂ ನಿಗಮದ ಹಂಚಿಕೆ ನಿಯಮಾವಳಿಗಳನ್ವಯ ಶೇಕಡವಾರು ಮೀಸಲಾತಿ ಪಡೆಯುವುದರಿಂದ, ಮೂಲ ಜಾತಿ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ನಿಗಮದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ಮಳಿಗೆ/ನಿವೇಶನಗಳಿಗೆ ಹಂಚಿಕೆ ಸಂದರ್ಭದಲ್ಲಿಯೇ ಶೇಕಡ 50ರಷ್ಟು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ. ಉಳಿದ ಶೇ.25ರ (ಗರಿಷ್ಠಮಿತಿ) ಮೊತ್ತವನ್ನು (ಮುಂಗಡ ಠೇವಣಿ ಸೇರಿಸಿ) ನಿಗಮಕ್ಕೆ ಹಂಚಿಕೆದಾರರು ಪಾವತಿಸಬೇಕಾಗಿದ್ದು, ಉಳಿದ ಶೇಕಡಾ 25 ರಷ್ಟು ನಿವೇಶನ/ಮಳಿಗೆಯ ಮೌಲ್ಯದ ಮೊತ್ತವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ವಾರ್ಷಿಕ ಶೇಕಡಾ 12.5ರ ಬಡ್ಡಿ ದರದೊಂದಿಗೆ ವಸೂಲಾತಿ ಮಾಡಿಕೊಳ್ಳಲಾಗುತ್ತದೆ.
- ಹಿಂದುಳಿದ ವರ್ಗಗಳ (ಪ್ರವರ್ಗ-1 & ಪ್ರವರ್ಗ-2ಎ ಪ್ರವರ್ಗ 2ಬಿ), ಉದ್ದಿಮೆದಾರರುಗಳಿಗೆ ನಿವೇಶನ ಮತ್ತು ಮಳಿಗೆಗಳ ಮೌಲ್ಯದಲ್ಲಿ ಶೇ.25ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದ್ದು, (ಸರ್ಕಾರದ ಮರುಪಾವತಿಗೊಳಪಟ್ಟು) ಉಳಿದ ಮೊತ್ತವನ್ನು 6 ಸಮ ತ್ರೈಮಾಸಿಕ ಕಂತುಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಮೂಲ ಜಾತಿ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಅರ್ಜಿದಾರರು Pan Card No, Aadhar Card ಪ್ರತಿಗಳನ್ನು ಮತ್ತು Bank a/c No, Branch Name, Place and IFSC Code, Mobile Number ಗಳನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

5. ನಿಗಮವು ಸರ್ಕಾರದ ನಿರ್ದೇಶನದನ್ವಯ ಮತ್ತು ಮಂಡಳಿಯು ರೂಪಿಸಿರುವ ಮಾನದಂಡದ ಅನ್ವಯ, ಅರ್ಜಿಗಳನ್ನು ಹಾಗೂ ಸಲ್ಲಿಸಿರುವ ಪೂರಕ ದಾಖಲೆಗಳನ್ನು ಪರಿಶೀಲಿಸಿ, ನಿವೇಶನಗಳ/ಮಳಿಗೆಗಳ ಹಂಚಿಕೆಗೆ ಪರಿಗಣಿಸಲಾಗುವುದು. ಆದ್ದರಿಂದ, ಅರ್ಜಿಯೊಂದಿಗೆ ಈ ಕೆಳಗಿನ ದಾಖಲೆಗಳನ್ನು ತಪ್ಪದೇ ಸಲ್ಲಿಸುವುದು

   - ಸಣ್ಣ ಕೈಗಾರಿಕಾ ತಾತ್ಕಾಲಿಕ/ಖಾಯಂ ನೋಂದಣಿ ಪತ್ರ (ಉದ್ಯೋಗ ಆಧಾರ್) ಪತ್ರವನ್ನು ಸಲ್ಲಿಸುವುದು.
   - ಉದ್ದೇಶಿತ ಯೋಜನಾ ವರದಿ.
   - ಅರ್ಜಿದಾರರ/ಪಾಲುದಾರರ/ನಿರ್ದೇಶಕ ವಿದ್ಯಾರ್ಹತೆಯ ಪ್ರಮಾಣ ಪತ್ರ.
   - ಅರ್ಜಿದಾರರು ಉತ್ಪಾದಿಸಿದ ಉತ್ಪನ್ನಗಳನ್ನು ಅಮದು / ರಫ್ತು ಮಾಡುತ್ತಿದ್ದಲ್ಲಿ ಹಾಗೂ ಕಚ್ಚಾ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು/ಸ್ಥಳೀಯ ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದಲ್ಲಿ, ಅದರ ದಾಖಲೆ.
   - ಅರ್ಜಿದಾರರು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ವಿಕಲಚೇತನರು / ಅಲ್ಪ ಸಂಖ್ಯಾತರು / ಅಲೆಮಾರಿ ಜನಾಂಗದವರಾಗಿದ್ದಲ್ಲಿ, ಸಂಬಂಧಪಟ್ಟ ತಹಶೀಲ್ದಾರ್‌ರವರ ದರ್ಜೆಗಿಂತ ಕಡಿಮೆ ಇರದ ಸರ್ಕಾರಿ ಪ್ರಾಧಿಕಾರದಿಂದ ಪಡೆದ ಮೂಲ ಜಾತಿ / ಅರ್ಹತಾ ಪ್ರಮಾಣ ಪತ್ರ.
   - ಅರ್ಜಿದಾರರ ಭಾವಚಿತ್ರ (2 ಸಂಖ್ಯೆ).
   - ಸಂವಿಧಾನದ ಪಾಲುದಾರಿಕೆ/ಖಾಸಗಿ ನಿಯಮಿತ/ಸಾರ್ವಜನಿಕ ನಿಯಮಿತ ಆದಲ್ಲಿ ಸಂಬಂಧಪಟ್ಟ ದೃಢೀಕೃತ ದಾಖಲೆಗಳನ್ನು ಸಲ್ಲಿಸುವುದು.
   - ಅರ್ಜಿದಾರರು ಒಂದು ಮಳಿಗೆ/ನಿವೇಶನಗಳಿಗಿಂತ ಹೆಚ್ಚಿಗೆ ಅರ್ಜಿ ಹಾಕಲು ಇಚ್ಚಿಸಿದಲ್ಲಿ ಪ್ರತಿ ಮಳಿಗೆ/ನಿವೇಶನಗಳಿಗೆ ಪ್ರತ್ಯೇಕವಾಗಿ ಅರ್ಜಿಯ ಜೊತೆ ಅರ್ಜಿ ಶುಲ್ಕ, ಪರಿಶೀಲನಾ ಶುಲ್ಕ ಹಾಗೂ ಮುಂಗಡ ಠೇವಣಿ ಹಣ ಪಾವತಿಸುವುದು.

- ಆಯಾ ಕೈಗಾರಿಕಾ ವಸಾಹತುವಿನಲ್ಲಿ ಒಂದು ಕುಟುಂಬಕ್ಕೆ ಒಂದು ಮಳಿಗೆ/ನಿವೇಶನ ಮಾತ್ರ ಹಂಚಿಕೆ ಮಾಡಲಾಗುವುದು.
- ಹಂಚಿಕೆಯಾದ ಮಳಿಗೆಗಳ ಮೌಲ್ಯವನ್ನು ಹಂಚಿಕೆ ಪತ್ರ ವಿತರಿಸಿದ 60 ದಿನಗಳಲ್ಲಿ ಸಾಮಾನ್ಯ ವರ್ಗದವರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು 90 ದಿನಗಳ ಕಾಲಾವಕಾಶದಲ್ಲಿ ಪಾವತಿಸತಕ್ಕದ್ದು.
- ಮಳಿಗೆಯ ಹಂಚಿಕೆಯು 10ವರ್ಷಗಳ ಗುತ್ತಿಗೆ ಕರಾರು ಅವಧಿಯ ಆಧಾರದ ಮೇಲೆ ಇರುತ್ತದೆ. ಈ ಮೇಲೆ ತಿಳಿಸಿರುವ ನಿವೇಶನ/ಮಳಿಗೆ ಮೌಲ್ಯ ಹಾಗೂ ಇತರೆ ವೆಚ್ಚಗಳು ತಾತ್ಕಾಲಿಕವಾಗಿದ್ದು, ಕೈಗಾರಿಕಾ ವಸಾಹತುಗಳ ಅಭಿವೃದ್ಧಿ ಕಾರ್ಯಗಳು ಸಂಪೂರ್ಣ ಮುಗಿಯುವವರೆಗಿನ ನಿಬಂಧನೆಗೆ ಒಳಪಟ್ಟು ಹೆಚ್ಚು ಅಥವಾ ಕಡಿಮೆ ಆಗಬಹುದಾಗಿರುತ್ತದೆ. ಅಭಿವೃದ್ಧಿ ವೆಚ್ಚ ಹಾಗೂ ಇತರೆ ವೆಚ್ಚಗಳು ಪರಿಷ್ಕೃತಗೊಂಡಲ್ಲಿ /ನಿಖರ ಅಳತೆಗಳಿಗೆ ಅನುಗುಣವಾಗಿ ಸದರಿ ಹೆಚ್ಚುವರಿ ಮೊತ್ತವನ್ನು ತಿಳಿಸುವ ದಿನಾಂಕದಿಂದ 30 ದಿನಗಳೊಳಗಾಗಿ ಪಾವತಿಸತಕ್ಕದ್ದು.
- ನಿಗಮದ ಮಂಡಳಿಯು ಕಾಲಕಾಲಕ್ಕೆ ನಿರ್ದೇಶಿಸುವ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.
- ಸರ್ಕಾರದ ಹೊಸ ಕೈಗಾರಿಕಾ ನೀತಿಯಲ್ಲಿ ನಿಗಧಿಪಡಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇಕಡಾ 22.5%, ಮಹಿಳಾ ಉದ್ಯಮಿಗಳಿಗೆ ಶೇಕಡಾ 5%, ಅಲ್ಪಸಂಖ್ಯಾಂತರಿಗೆ ವಿಕಲಚೇತನರಿಗೆ, ಹಿಂದುಳಿದ ವರ್ಗ (ವರ್ಗ–1 & ವರ್ಗ–2ಎ), ಮಾಜಿ ಸೈನಿಕರಿಗೆ ಒಟ್ಟಾರೆ ಎಲ್ಲಾ ವರ್ಗಗಳಿಗೆ ಸೇರಿ ಶೇ. 10 ರಷ್ಟು ಮೀಸಲಾತಿ ನೀಡಲಾಗುವುದು.
- ನಿವೇಶನಗಳು /ಮಳಿಗೆಗಳು ಆಯಾ ಕೈಗಾರಿಕಾ ವಸಾಹತುವಿನ ಮುಖ್ಯ ರಸ್ತೆಗಳಿಗೆ ಎದುರು ಇದ್ದಲ್ಲಿ, ಮುಖ್ಯ ರಸ್ತೆ ಹೊಂದಿಕೊಂಡು ಮೂಲೆ ನಿವೇಶನವಾಗಿದ್ದಲ್ಲಿ ಶೇಕಡಾ 10% ರಂತೆ (ಎ ಪ್ರವರ್ಗಕ್ಕೆ / ಶೇಕಡಾ 5% ರಂತೆ (ಬಿ) ಪ್ರವರ್ಗಕ್ಕೆ ಪ್ರಕಟಿಸಿದ ಬೆಲೆಗಿಂತ ಹೆಚ್ಚಾಗಿ ವಿಧಿಸಲಾಗುವುದು. 'ಸಿ' ಮತ್ತು 'ಡಿ' ಪ್ರವರ್ಗದ ಕೈಗಾರಿಕೆಗಳಿಗೆ ಇದು ಅನ್ವಯಿಸುವುದಿಲ್ಲ.
- ಅರ್ಜಿ ಸಲ್ಲಿಸುವ ಮೊದಲು ಕೈಗಾರಿಕಾ ವಸಾಹತುವಿಗೆ ಭೇಟಿ ನೀಡಿ, ಸ್ಥಳ ಪರಿಶೀಲಿಸಿ ನಿವೇಶನ/ಮಳಿಗೆಯನ್ನು ಪರಿಶೀಲಿಸಿ ಯಥಾಸ್ಥಿತಿಯಲ್ಲಿ ಪಡೆಯುವ ಬಗ್ಗೆ ಒಪ್ಪಿಗೆಯನ್ನು ಪ್ರಮಾಣದ ಪತ್ರವನ್ನು ಅರ್ಜಿಯ ಜೊತೆಯಲ್ಲಿ ಕಡ್ಡಾಯವಾಗಿ ಸಲ್ಲಿಸುವುದು.
- ಹಂಚಿಕೆಯಾದ ನಿವೇಶನದಲ್ಲಿ ಯಾವುದೇ ವಿದ್ಯುತ್ ಮಾರ್ಗ ಮತ್ತು ಯು.ಜಿ.ಡಿ. ಹಾದು ಹೋಗಿದ್ದಲ್ಲಿ ಅದನ್ನು ಅವರ ಸ್ವಂತ ಖರ್ಚಿನಲ್ಲಿ ಸ್ಥಳಾಂತರಿಸಲು ಹಂಚಿಕೆದಾರರೇ ಕ್ರಮ ಕೈಗೊಳ್ಳಬೇಕಿರುತ್ತದೆ.
- ಯಾವುದೇ ಒಂದು ನಿಗಧಿತ ಮಳಿಗೆ/ನಿವೇಶನಕ್ಕೆ 6 ಅಥವಾ 6 ಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತಗೊಂಡಲ್ಲಿ, ಸದರಿ ನಿವೇಶನ/ಮಳಿಗೆ ಹಂಚಿಕೆಗೆ ಸಲ್ಲಿಸಿರುವ ಅರ್ಜಿದಾರರ ನಡುವೆ ಹರಾಜು ಪ್ರಕ್ರಿಯೆ ಮೂಲಕ ಹಂಚಿಕೆ ಮಾಡಲಾಗುವುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಜಿದಾರರು ಸಾಮಾನ್ಯ ವರ್ಗದವರಿಗೆ ಮೀಸಲಾದ ಮಳಿಗೆ/ನಿವೇಶನಗಳಿಗೆ ಅರ್ಜಿ ಸಲ್ಲಿಸಿ ಹರಾಜಿನಲ್ಲಿ ಭಾಗವಹಿಸಿ ಯಶಸ್ವಿಯಾದಲ್ಲಿ ಮೂಲ ಬೆಲೆಯ ಮೇಲೆ ಮಾತ್ರ ಶೇ.50 ರಷ್ಟು ರಿಯಾಯಿತಿ/ಸಹಾಯಧನವನ್ನು ವಿಸ್ತರಿಸಲಾಗುವುದು.
- ನಿಗಮವು ಅರ್ಜಿ ಜೊತೆ ಪಡೆದಿರುವ ಮುಂಗಡ ಠೇವಣಿ ಮೊತ್ತದ ಮೇಲೆ ಯಾವುದೇ ಬಡ್ಡಿಯನ್ನು ನೀಡುವುದಿಲ್ಲ.
- ಯಾವುದೇ ಮಳಿಗೆ/ನಿವೇಶನ ಹಂಚಿಕೆ ಮಾಡದಿರುವ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ / ಮರು ಪ್ರಕಟಣೆಗೆ ಹೊರಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
- ಆಯಾ ಕೈಗಾರಿಕಾ ವಸಾಹತುಗಳಲ್ಲಿ ಒದಗಿಸಿರುವ ವಿದ್ಯುತ್ ಸಂಪರ್ಕ ಮಾರ್ಗ ಶುಲ್ಕವನ್ನು ಹಂಚಿಕೆದಾರರು ಪಾವತಿಸಬೇಕಾಗುತ್ತದೆ.
- ಮಳಿಗೆ/ನಿವೇಶನ/ಗೋದಾಮುಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಹಂಚಿಕೆಯಾಗದ ಅರ್ಜಿದಾರರಿಗೆ ಹಂಚಿಕೆ ಪ್ರಕ್ರಿಯೆ ಮುಗಿದ ನಂತರ ಮತ್ತು ಅರ್ಜಿಯನ್ನು ಹಿಂಪಡೆಯುವ ಅರ್ಜಿದಾರರಿಗೆ ಮುಂಗಡ ಠೇವಣಿ ಮೊತ್ತವನ್ನು ಮಾತ್ರ ಹಿಂದಿರುಗಿಸಲಾಗುವುದು. ಮುಂದುವರೆದು ಅರ್ಜಿಯ ಜೊತೆಯಲ್ಲಿ ಪಾವತಿಸಿರುವ ಅರ್ಜಿ ಶುಲ್ಕ ಮತ್ತು ಪರಿಶೀಲನಾ ಶುಲ್ಕ ಹಿಂದಿರುಗಿಸುವುದಿಲ್ಲ.

6. ಅರ್ಜಿದಾರರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ, ಈ ಕೆಳಗಿನ ಮಾನದಂಡಗಳನ್ನು ಆಧಾರವಾಗಿಟ್ಟುಕೊಂಡು ಅಂಕಗಳನ್ನು ನೀಡಿ ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್‌ಗಳನ್ನು ಹಂಚಿಕೆಗೆ ಪರಿಗಣಿಸಲಾಗುವುದು.

**The criteria considered for weightage is as mentioned below:**

| Sl. No | Criteris | Max Marks | Sub-Criteria Marks | | |
|---|---|---|---|---|---|
| 1 | Existing Industry | 10 | a) | More than 3 yrs. | 10 |
| | | | b) | Less than 3 yrs. | 5 |
| 2 | Existing Industry rented | 10 | a) | More than 3 yrs. | 10 |
| | | | b) | Less than 3 yrs. | 5 |
| 3 | First Generation | 10 | | | |
| 4 | Technocrats | 10 | a) | BE. MBA. MCA. | 10 |
| | | | b) | Diploma | 7 |
| | | | c) | ITI & allied courses | 5 |
| 5 | Location | 10 | a) | Applicants belonging to same District. | 10 |
| | | | b) | Applicants of Other Districts | 5 |
| 6 | Employment | 15 | a) | Less than 10 | 5 |
| | | | b) | More than 10 | 10 |
| | | | c) | More than 20 | 15 |
| 7 | Product | 15 | a) | Export, High-tech Import-Substitute | 15 |
| | | | b) | Ancillary/ local Resource | 10 |
| | | | c) | Others | 5 |
| 8 | Non- Polluting | 10 | a) | Green | 10 |
| | | | b) | Orange | 5 |
| | | | c) | Red | 0 |
| 9 | Mobilization of Funds | 10 | a) | Mobilization funds | 10 |

## ANNEXURE 4: LIST OF INDUSTRIAL ACTIVITIES / ENTERPRISES NOT ELIGIBLE FOR INCENTIVES AND CONCESSIONS.

1. Breweries & Distilleries of all types excluding winery & ethanol plant established as integral part of sugar industry.
2. Khandasari and Jaggery making enterprises.
3. Photo Studios & Colour Processing and instant photo printing Enterprises.
4. Photo Copying / Xerox Machines / Fax Machines / Data Entry / Data Recovery enterprises.
5. Fertilizer mixing units.
6. All types of Saw Mills excluding manufacture of particle board / Low Density Fiber Board (LDF)/Medium Density Fiber Boards (MDF)/High Density Fiber Boards(HDF).
7. Beedies / Cigarettes / Cigars / Gutka & Tobacco based products manufacturing enterprises.
8. Azoic / Reactive Dyes manufacturing enterprises.
9. Fire Cracker manufacturing enterprises.
10. Industries manufacturing Ozone depleting substances.
11. Laundries including Power Laundries.
12. Brick making Enterprises excluding Cement Hollow / Solid Blocks, Wire Cut, Fly Ash Bricks and Refractory Bricks.
13. Poultry including hatcheries.
14. Popcorn and Ice candy making Enterprises excluding Ice Cream Manufacturing.
15. Coffee roasting and grinding units having installed capacity of less than 2MT a day.
16. Clock and Watch / Mobile / Computer and Hardware equipment repair enterprises.
17. Cassette recording [Audio & Video] enterprises.
18. Cyanide Manufacturing enterprises.
19. Mining and Mining Equipment.
20. Lime kiln / burnt lime units.
21. X-ray clinics and clinical / pathological laboratories and scanning, MRI testing enterprises.
22. All industries of mobile nature like rigs, concrete / tar mixing plants / hot-mix plants including site oriented plants / industries.
23. Units engaged in manufacture of Chrysolite Asbestos (White Crystal).
24. All types of Saloon / Spas / Massage Centres, etc.
25. All types of hotels / restaurants / resorts / amusement parks, etc.
26. Vermi compost
27. Roof top solar power generation.
28. Bottling of LPG and other gases.
29. Aggregators/ supply chain business Enterprises related to / supporting bio-fuel manufacturing units.

*Considering the contribution to environment, eligible subsidy will be extended to new investments made on establishing of ETPs.*